# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಬುಧವಾರ, ಸೆಪ್ಟೆಂಬರ್ 07, 2022

ಸಂಪುಟ : 49 ಸಂಚಿಕೆ : 115 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com


## ಪಂಪ್‌ಸೆಟ್‌ಗಳಿಗೆ ಮೀಟರ್ ಇಲ್ಲ

ಬೆಂಗಳೂರು, ಸೆ. 6 - ಕೃಷಿ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಕೆ ಇಲ್ಲ. ಬಡತನದ ರೇಖೆಗಿಂತ ಕೆಳಗಿರುವ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ 75 ಯುನಿಟ್ ಉಚಿತ ವಿದ್ಯುತ್ ಮುಂದುವರೆಯಲಿದೆ ಎಂದು ಇಂಧನ ಖಾತೆ ಸಚಿವ ವಿ. ಸುನೀಲ್‌ಕುಮಾರ್ ಸ್ಪಷ್ಟಪಡಿಸಿದ್ದಾರೆ.

ರೈತರಿಗೆ ನಿರಂತರ ವಿದ್ಯುತ್ ಕಲ್ಪಿಸಲು ಸರ್ಕಾರ ಹತ್ತು ಹಲವು ಯೋಜನೆಗಳನ್ನು ಹಮ್ಮಿಕೊಳ್ಳುತ್ತದೆ. ಇಂತಹ ಸಂದರ್ಭದಲ್ಲಿ ಅವರು ಬಳಸುವ ವಿದ್ಯುತ್‌ಗೆ ದರ ನಿಗದಿಪಡಿಸುವ ಪ್ರಶ್ನೆಯೇ ಇಲ್ಲ ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಹಿಂದಿನ ಸಿದ್ದರಾಮಯ್ಯ ಸರ್ಕಾರ ಕೃಷಿ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸಿ ವಿದ್ಯುತ್ ಪ್ರಸರಣ ನಿಗಮಗಳನ್ನೇ ಖಾಸಗೀಕರಣಗೊಳಿಸಲು ಮುಂದಾಗಿತ್ತು. ಕಾಂಗ್ರೆಸ್ ಸರ್ಕಾರ ಮತ್ತೆ ರಾಜ್ಯದಲ್ಲಿ ಅಧಿಕಾರಕ್ಕೆ ಬಂದರೆ ಇಂಧನ ಇಲಾಖೆಯನ್ನು ಖಾಸಗಿಯವರ ಮಡಿಲಿಗೆ ನೀಡುತ್ತದೆ ಎಂದು ಹೇಳಿದರು.

ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ವಿದ್ಯುತ್ (3ನೇ ಪುಟಕ್ಕೆ)

## ನೌಕರರಿಗೆ ಬಂಪರ್ ಕೊಡುಗೆ

ಬೆಂಗಳೂರು, ಸೆ. 6 - ವಿಧಾನಸಭಾ ಚುನಾವಣೆ ಸಮೀಪಿಸುತ್ತಿದ್ದಂತೆ ರಾಜ್ಯ ಸರ್ಕಾರಿ ನೌಕರರಿಗೆ ಬಂಪರ್ ಕೊಡುಗೆ ನೀಡಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮುಂದಾಗಿದ್ದಾರೆ.

ಸರ್ಕಾರಿ ನೌಕರರಿಗೆ ವೇತನ ಮತ್ತಿತರೆ ಭತ್ಯೆಗಳನ್ನು ಪರಿಷ್ಕರಿಸಲು ಇದೇ ಅಕ್ಟೋಬರ್ ತಿಂಗಳಲ್ಲಿ ಏಳನೇ ವೇತನ ಆಯೋಗ ರಚಿಸುವುದಾಗಿ ಮುಖ್ಯಮಂತ್ರಿ ಅವರು ಘೋಷಣೆ ಮಾಡಿದ್ದಾರೆ. ವಿಧಾನ ಸೌಧದ ಸಭಾಂಗಣದಲ್ಲಿ ಸಿಬ್ಬಂದಿ ಮತ್ತು ಆಡಳಿತ (4ನೇ ಪುಟಕ್ಕೆ)

## ಸುಗಮವಾಗಿ ಕೈಗಾರಿಕಾ ಜಮೀನು ಹಂಚಿಕೆ ಪದ್ಧತಿ

ಬೆಂಗಳೂರು, ಸೆ.6 - ಕರ್ನಾಟಕ ಕೈಗಾರಿಕಾ ಇಲಾಖೆ ಭೂಮಿ ಹಂಚಿಕೆ ವ್ಯವಸ್ಥೆ ಸರಳೀಕರಣಗೊಳಿಸಿದೆ. 'ಈಸ್ ಆಫ್ ಡುಯಿಂಗ್ ಬಿಸಿನೆಸ್' ಮಾದರಿಯಲ್ಲಿ 'ಈಸ್ (3ನೇ ಪುಟಕ್ಕೆ)


## ಹೃದಯಪೂರ್ವಕ ಅಭಿನಂದನೆಗಳು

2017-18ನೇ ಸಾಲಿನ ಕೆ.ಎ.ಎಸ್. ಫಲಿತಾಂಶ

ದಿನಾಂಕ : 5.09.2022 ರಂದು ಪ್ರಕಟಗೊಂಡಿದ್ದು, 106 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಲ್ಲಿ ದಾವಣಗೆರೆಯ ಪ್ರತಿಷ್ಠಿತ ಸ್ಪರ್ಧಾತ್ಮಕ ಸಂಸ್ಥೆಯಾದ Copper Age Study Circle for Competitive Exams ನಲ್ಲಿ ವ್ಯಾಸಂಗ ಮಾಡಿದ ಐದು ಜನ ವಿದ್ಯಾರ್ಥಿಗಳು ರಾಜ್ಯದ ಪ್ರತಿಷ್ಠಿತ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿರುತ್ತಾರೆ.

ಅವರಿಗೆ Copper Age Study Circle for Competitive Exams ಸಂಸ್ಥೆಯ ವತಿಯಿಂದ

ಹೃತ್ಪೂರ್ವಕ ಅಭಿನಂದನೆಗಳು...



ಸ್ಫೂರ್ತಿ ಎನ್. ಸಕ್ರಿ.
Assistant Commissioner
Commercial tax
ರಾಜ್ಯಕ್ಕೆ ಪ್ರಥಮ



ಸಂಜನಾ ಸಿ.ಎಸ್.
Tahasildar



ಶೀತಲ್ ಟಿ.ಎಸ್.
Tahasildar



ಲಕ್ಷ್ಮಿ ಆರ್.
Assistant Director



ಪುಂಡಲೀಕ್ ಅನವಾಲ್.
Labour Officer

ಶುಭ ಕೋರುವವರು :



ಶರತ್ ಜಿ.ಎನ್.
Director, Copper Age Study Circle for Competitive Exams
ಅಧ್ಯಾಪಕರು ಮತ್ತು ಸಿಬ್ಬಂದಿ ವರ್ಗ

M : 94823 36181
M : 83102 67534



## ಚಿರಸ್ಮರಣೆ



ಉಸಿರು ಹೋದರೂ ಹೆಸರು ಉಳಿಸಿದ
ಲಿಂ|| ಶ್ರೀ ಶಾಮನೂರು ಕಲ್ಲೇಶಪ್ಪನವರು
ಅಧ್ಯಕ್ಷರು, ದಾವಣಗೆರೆ ರೈತರ ಫಸಲುಗಳ ಪರಿವರ್ತನಾ ಮತ್ತು ವ್ಯಾಪಾರೋದ್ಯಮ ಸಹಕಾರ ಸಂಘ (ನಿ), ದಾವಣಗೆರೆ.
ನಿರ್ದೇಶಕರು, ದಾವಣಗೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ದಾವಣಗೆರೆ.
ನಿಧನ : 07-09-2020

ಉಸಿರು ಹೋದರೂ ಹೆಸರು ಉಳಿಸಿದ
ಲಿಂ|| ಶ್ರೀಮತಿ ಶಾಮನೂರು ಪಾರ್ವತಮ್ಮ
(ಲಿಂ|| ಶ್ರೀ ಶಾಮನೂರು ಕಲ್ಲೇಶಪ್ಪನವರ ಧರ್ಮಪತ್ನಿ)
ನಿಧನ : 14-05-2019

ನೀವು ನಮ್ಮನ್ನಗಲಿ ವರ್ಷಗಳೂ ಕಳೆದರೂ, ನಿಮ್ಮ ನೆನಪು ಸದಾ ಹಚ್ಚ ಹಸಿರಾಗಿದ್ದು, ನಿಮ್ಮ ಪ್ರೀತಿ - ವಾತ್ಸಲ್ಯ - ಆದರ್ಶ - ಶಿಸ್ತು - ಪ್ರಾಮಾಣಿಕತೆ ಮತ್ತು ಶ್ರಮದ ಕಾಯಕತ್ವವು ನಮಗೆಲ್ಲಾ ಆದರ್ಶವಾಗಿವೆ. ನೀವು ತೋರಿದ ಸನ್ಮಾರ್ಗದಲ್ಲಿ ಮುನ್ನಡೆಯುತ್ತಿದ್ದೇವೆ. ಪರಮಾತ್ಮನು ನಿಮ್ಮ ಪವಿತ್ರ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

- ಡಾ|| ಟಿ.ಜಿ. ರವಿಕುಮಾರ್ (ಆರೈಕೆ ಹಾಸ್ಪಿಟಲ್ಸ್)
- ಶ್ರೀಮತಿ ಮೇಘನಾ ಮತ್ತು ಪವಿತ್ರ ಎಸ್.ಕೆ.
  ಅಧ್ಯಕ್ಷರು, ರೈತರ ಫಸಲುಗಳ ಪರಿವರ್ತನಾ ಮತ್ತು ವ್ಯಾಪಾರೋದ್ಯಮ ಸಹಕಾರ ಸಂಘ (ನಿ.) ದಾವಣಗೆರೆ.
- ಶ್ರೀಮತಿ ಶ್ವೇತ ಮತ್ತು ಪ್ರದೀಪ್ ಎಸ್.ಕೆ.
- ಗೌರಿ, ಸಮನ್ಯು, ಚಿರಂತನ್, ಅಭಿಜ್ಞಾನ್

ಶಾಮನೂರು ವಂಶಸ್ಥರು, ಬಂಧು-ಮಿತ್ರರು


## ಸಚಿವ ಉಮೇಶ್ ಕತ್ತಿ ಇನ್ನಿಲ್ಲ



ಬೆಂಗಳೂರು, ಸೆ. 6 – ರಾಜ್ಯ ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಮತ್ತು ಅರಣ್ಯ ಸಚಿವ ಉಮೇಶ್ ಕತ್ತಿ ತೀವ್ರ ಹೃದಯಾಘಾತದಿಂದ ಮಂಗಳವಾರ ರಾತ್ರಿ ನಿಧನರಾಗಿದ್ದಾರೆ. ಅವರಿಗೆ 61 ವರ್ಷ ವಯಸ್ಸಾಗಿತ್ತು.

ಬೆಂಗಳೂರಿನ ಡಾಲರ್ಸ್ ಕಾಲೊನಿಯಲ್ಲಿರುವ ಅವರ ನಿವಾಸದಲ್ಲಿ ರಾತ್ರಿ 10.30ರ ಸುಮಾರಿಗೆ ಸಚಿವರಿಗೆ ಹೃದಯಾಘಾತವಾಗಿತ್ತು. ಅವರನ್ನು ಎಂ.ಎಸ್.ರಾಮಯ್ಯ (2ನೇ ಪುಟಕ್ಕೆ)

## ಇನ್ಫೋಸಿಸ್‌ನಿಂದ ಉಚಿತ ವ್ಯಾಸಂಗ

ಬೆಂಗಳೂರು, ಸೆ. 6 - ಇನ್ಫೋಸಿಸ್ ಸ್ಪ್ರಿಂಗ್‌ಬೋರ್ಡ್ ವ್ಯವಸ್ಥೆಯಡಿ 12,300 ಕೋರ್ಸುಗಳು ಉಚಿತವಾಗಿ 6ನೇ ತರಗತಿಯಿಂದ ಪಿಎಚ್‌ಡಿವರೆಗೆ ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ಕಲಿಕೆ ಮಾಡಲು ರಾಜ್ಯ ಸರ್ಕಾರ ಅವಕಾಶ ಮಾಡಿಕೊಟ್ಟಿದೆ.

ಇನ್ಫೋಸಿಸ್ ಸಂಸ್ಥೆ ಹಾಗೂ ಬೆಂಗಳೂರು, ಮಂಗಳೂರು, ಮೈಸೂರು, ಕರ್ನಾಟಕ, ತುಮಕೂರು, ಗುಲ್ಬರ್ಗ, ಕುವೆಂಪು, ಸಂಗೀತ, ಜಾನಪದ ಸೇರಿದಂತೆ ಎಲ್ಲಾ 24 ವಿ.ವಿ.ಗಳ ಕುಲಪತಿಗಳು ಇಂದಿಲ್ಲಿ (4ನೇ ಪುಟಕ್ಕೆ)


## ನಿವೃತ್ತ ಮುಖ್ಯೋಪಾಧ್ಯಾಯ ಎಂ.ಎಂ ತೆಂಬದ್ ನಿಧನ



ದಾವಣಗೆರೆ ವಿದ್ಯಾನಗರ ಮುಖ್ಯರಸ್ತೆ ಪಾರ್ಕ್ ಎದುರು ವಾಸಿ, ನಿವೃತ್ತ ಮುಖ್ಯೋಪಾಧ್ಯಾಯರಾದ **ಎಂ.ಎಂ ತೆಂಬದ್ (90)** ಅವರು, ದಿನಾಂಕ 6.9.2022 ರ ಮಂಗಳವಾರ ಮಧ್ಯಾಹ್ನ 3 ಗಂಟೆಗೆ ನಿಧನರಾಗಿದ್ದಾರೆ. ಪತ್ನಿ, ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ.

ದಿನಾಂಕ 7.9.2022ರ ಬುಧವಾರ ಬೆಳಿಗ್ಗೆ 10 ರವರೆಗೆ ವಿದ್ಯಾನಗರದಲ್ಲಿರುವ ಮೃತರ ನಿವಾಸದಲ್ಲಿ ನಂತರ ಮಧ್ಯಾಹ್ನ 1 ಗಂಟೆಯವರೆಗೆ ಚಳಗೇರಿ ಗ್ರಾಮದಲ್ಲಿ ಅಂತಿಮ ದರ್ಶನಕ್ಕೆ ಇಡಲಾಗುವುದು.

ಮಧ್ಯಾಹ್ನ 2 ಗಂಟೆಗೆ ಪಾರ್ಥಿವ ಶರೀರವನ್ನು ಜೆಜೆಎಂ ಮೆಡಿಕಲ್ ಕಾಲೇಜಿಗೆ ಹಸ್ತಾಂತರಿಸಲಾಗುವುದು.

ಇಂತಿ ದುಃಖತಪ್ತರು : ಧರ್ಮಪತ್ನಿ : ಸರ್ವಮಂಗಳಮ್ಮ ತೆಂಬದ್, ಡಾ. ಮಂಜುನಾಥ್ ತೆಂಬದ್ ಪ್ರಾಧ್ಯಾಪಕರು, ಜೆಜೆಎಂ ಮೆಡಿಕಲ್ ಕಾಲೇಜು
ಮೊ : 94487 27210, 95913 57050



|| ಶ್ರೀ ನಿಡಗುಂದಿ ವೀರಭದ್ರೇಶ್ವರ ಪ್ರಸನ್ನ || ||ಮಜ್ಜಿಗೇರಿ ಬಸವೇಶ್ವರ ಪ್ರಸನ್ನ||

## ಮೂರನೇ ವರ್ಷದ ಪುಣ್ಯಸ್ಮರಣೆ



ಶರಣೆ ದಿ. ಶೋಭಾ ಶರಣಪ್ಪ ಬೇವಿನಮಟ್ಟಿ
(ಬಸಮ್ಮ ನೀಲಗುಂದ) ನಿಧನ : 07.09.2019
(ದಿ|| ಸರ್ವಮ್ಮ, ದಿ|| ಎನ್. ಮುರಿಗೆಪ್ಪ ಇವರ ಮಗಳು ಕಾಯಿಪೇಟೆ, ದಾವಣಗೆರೆ)

ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ....

ಪತಿ : ಶರಣಪ್ಪ ಬೇವಿನಮಟ್ಟಿ ಮಕ್ಕಳಾದ : ಬಿ.ಎಸ್. ವೀರೇಶ್ ಬಿ.ಎಸ್. ವಿಜಯಕುಮಾರ್, ಬಿ.ಎಸ್. ಶಿಲ್ಪ
ಸೊಸೆ : ಪಿ.ಎ. ಉಷಾ, ಅಳಿಯ : ಕೆ.ಎಂ. ಗಿರೀಶ್ ಹಾಗೂ ಬಂಧು-ಮಿತ್ರರು.

ವಿಳಾಸ : ಶರಣಪ್ಪ ಬೇವಿನಮಟ್ಟಿ (ಇಳಕಲ್)
# 1245/11, 7ನೇ ಕ್ರಾಸ್, 2ನೇ ಮೇನ್, ಮಾಗನೂರು ಬಸಪ್ಪ ಶಾಲೆ ಪಕ್ಕ, ತರಳಬಾಳು ಬಡಾವಣೆ, ದಾವಣಗೆರೆ - 05.
ಮೊ. : 8150023787, 8095420524






ಬುಕ್ಕಿಂಗ್ ಪ್ರಾರಂಭ ಗೊಂಡಿದೆ

## ಶಂಕರಲೀಲಾ ಕನ್ವೆನ್ಷನ್ ಹಾಲ್ (ಹವನಿಯಂತ್ರಿತ)

ಮಧುವೆ, ಹುಟ್ಟುಹಬ್ಬ, ನಿಶ್ಚಿತಾರ್ಥ, ನಾಮಕರಣ ಸೇರಿದಂತೆ ಇನ್ನಿತರೆ ಶುಭ ಸಮಾರಂಭಗಳಿಗೆ ಸುಸಜ್ಜಿತವಾದ ದಾವಣಗೆರೆ ನಗರಕ್ಕೆ ಹತ್ತಿರವಿರುವ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿರುವ ಶಂಕರಲೀಲಾ ಕನ್ವೆನ್ಷನ್ ಹಾಲ್ (ಹವನಿಯಂತ್ರಿತ) ಈಗ ನಗರದ ಜನತೆಗೆ ಕೈಗೆಟಕುವ ದರದಲ್ಲಿ ಲಭ್ಯ.

- ಹವನಿಯಂತ್ರಿತ ಆರತಕ್ಷತೆ ಹಾಲ್
- 100 ಕೆ.ವಿ. ಜನರೇಟರ್
- ಹವನಿಯಂತ್ರಿತ ಕೊಠಡಿಗಳು
- ಡಿಲಕ್ಸ್ ಕೊಠಡಿಗಳು
- ಪ್ರತ್ಯೇಕ ಪಾರ್ಟಿ ಹಾಲ್
- ವಿಶಾಲವಾದ ಊಟದ ಹಾಲ್
- ಬಿಸಿ ನೀರಿನ ವ್ಯವಸ್ಥೆ
- ಪಾರ್ಕಿಂಗ್ ಸೌಲಭ್ಯ

ಪದ್ಮಶ್ರೀ ಚಿಂದೋಡಿಲೀಲಾ ಟ್ರಸ್ಟ್(ರಿ)

ಶಂಕರಲೀಲಾ ಕನ್ವೆನ್ಷನ್ ಹಾಲ್

ರಾಷ್ಟ್ರೀಯ ಹೆದ್ದಾರಿ ಪಕ್ಕ (ಶಂಕರಲೀಲಾ ಪೆಟ್ರೋಲ್ ಬಂಕ್ ಮುಂಭಾಗ), ಆವರಗೆರೆ, ದಾವಣಗೆರೆ.
99164 54770, 90190 94446, 74118 14461

# ಸಂಕುಚಿತ ಭಾವನೆ ತ್ಯಜಿಸಿದರೆ ಉನ್ನತಿ : ಶ್ರೀ ಶೈಲ ಜಗದ್ಗುರು



ದಾವಣಗೆರೆ, ಸೆ.6- ಸಂಕುಚಿತ ಮನೋಭಾವನೆಗಳನ್ನು ಪರಿತ್ಯಜಿಸಿ ಸರ್ವರಲ್ಲಿ ಪ್ರೀತಿ ಹೆಚ್ಚಿಸುವ ಸಮಷ್ಠಿ ಪ್ರಜ್ಞೆಯನ್ನು ಬೆಳೆಸಿಕೊಂಡಾಗ ಸರ್ವರ ಬದುಕಿನಲ್ಲಿ ಉನ್ನತಿಯುಂಟಾಗಿ ಸರ್ವೋದಯ ಸಾಧ್ಯವಾಗುತ್ತದೆ ಎಂದು ಶ್ರೀ ಶೈಲ ಜಗದ್ಗುರು ಡಾ.ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿ ಹೇಳಿದರು.

ದಾವಣಗೆರೆ-ಹರಿಹರ ಅರ್ಬನ್ ಸಹಕಾರಿ ಸಮುದಾಯ ಭವನದಲ್ಲಿ ಇಂದು ಹಮ್ಮಿ ಕೊಳ್ಳಲಾಗಿದ್ದ ಲಿಂ.ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅವರ 36ನೇ ವಾರ್ಷಿಕ ಪುಣ್ಯಾರಾಧನೆ ಮತ್ತು ಲಿಂ.ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅವರ 11ನೇ ವರ್ಷದ ಸ್ಮರಣೋತ್ಸವ ಹಾಗೂ ದ್ವಾದಶ ಪೀಠಾರೋಹಣ ಮಹೋತ್ಸವ, ಜನಜಾಗೃತಿ ಧರ್ಮ ಸಮ್ಮೇಳನದ 2ನೇ ದಿನದ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಸ್ವಾರ್ಥ ತುಂಬಿದ ಭೌತಿಕ ಸಂಪಾದನೆಗಳಿಂದ ಸಾಮಾನ್ಯ ಜನರನ್ನು ಮೆಚ್ಚಿಸಬಹುದೇ ಹೊರತು, ಭಗವಂತನನ್ನು ಮೆಚ್ಚಿಸಲು ಸಾಧ್ಯವಿಲ್ಲ ಎಂದು ಶ್ರೀಗಲು ನುಡಿದರು.

ಸಾಮಾನ್ಯವಾಗಿ ನಮಗೆ ಕಷ್ಟಗಳು ಬಂದಾಗ ಅಳುವ ನಾವು, ಇತರರ ಕಷ್ಟಗಳನ್ನು ಕಂಡು ಖುಷಿ ಪಡುವ ಸ್ವಭಾವ ಹೊಂದಿರುತ್ತೇವೆ. ಇದು ಸರಿಯಲ್ಲ. ನಮಗೆ ಕಷ್ಟಗಳು ಬಂದಾಗ ಧೈರ್ಯದಿಂದ ಎದುರಿಸಬೇಕು. ಇತರರಿಗೆ ಬರುವ ಕಷ್ಟಗಳನ್ನು ಕಂಡು ಕನಿಕರ ಪಡುವ ಕರುಣೆಯನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ನಮಗೆ ಹಸಿವಾದಾಗ ನಾವು ಊಟ ಮಾಡುವುದೇನೂ ದೊಡ್ಡದಲ್ಲ. ಇನ್ನೊಬ್ಬರ ಹಸಿವನ್ನು ಇಂಗಿಸಲು ನಾವು ಸದಾ ಪ್ರಯತ್ನಿಸುವುದು ಮತ್ತು ಪ್ರಸಂಗ ಬಂದರೆ ಅದಕ್ಕಾಗಿ ನಾವು ಉಪವಾಸ ವಿರಲೂ ಸನ್ನದ್ಧರಾಗುವುದು ಮಹಾಮಾನವತೆಯ ಲಕ್ಷಣವಾಗಿದೆ ಎಂದು ಹೇಳಿದರು.

ನಮಗೆ ಯಾವುದು ಪ್ರಿಯವಾಗಿರುತ್ತದೋ ಅದುವೇ ಎಲ್ಲರಿಗೂ ಬೇಕಾಗಿರುತ್ತದೆ. ನಮಗೆ ಯಾವುದು ಬೇಡವಾಗಿರುತ್ತದೆಯೋ ಅದು ಇತರರಿಗೆ ಬೇಡವಾಗುತ್ತದೆ. ಆದ್ದರಿಂದ ನಮಗೆ ಇಷ್ಟವಾಗುವುದನ್ನೇ ಇತರರಿಗೂ ನೀಡಬೇಕು. ನಮಗೆ ಬೇಡವಾದುದನ್ನು ಎಂದೂ ಯಾರಿಗೂ ಕೊಡಲು ಮುಂದಾಗಬಾರದು. ಇದು ಧರ್ಮದ ಮೂಲ ಸೂತ್ರವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸಂಸದ ಜಿ.ಎಂ. ಸಿದ್ದೇಶ್ವರ, ಶ್ರೀಶೈಲ ಮಠವು ನಮ್ಮ ಮನೆಯ ಮಠ ಇದ್ದ ಹಾಗೆ. ನಮ್ಮ ಮನೆಯ ದೇವರೂ ಸಹ ಶ್ರೀಶೈಲ. ನಮ್ಮ ಹಿರಿಯರ ಕಾಲದಿಂದಲೂ ಶ್ರೀಶೈಲ ಮಠದ ಭಕ್ತರು ನಾವು ಎಂದು ಹೇಳಿದರು.

ಮಾನವ ಧರ್ಮಕ್ಕೆ ಜಯವಾಗಲಿ ಎಂದು ಹೇಳುವ ಮೂಲಕ ಪಂಚ ಪೀಠಗಳು ಎಲ್ಲರಿಗೂ ಒಳಿತಾಗಲಿ ಎಂದು ಬಯಸಿ, ಆಶೀರ್ವದಿಸುತ್ತಿವೆ. ಶ್ರೀ ಶೈಲ ಮಠಕ್ಕೆ ಕೇವಲ ಕರ್ನಾಟಕದಲ್ಲಷ್ಟೇ ಭಕ್ತರಿಲ್ಲ. ತಮಿಳು ನಾಡು, ಆಂಧ್ರ ಪ್ರದೇಶ, ತೆಲಂಗಾಣ ಸೇರಿದಂತೆ ನೆರೆಯ ರಾಜ್ಯಗಳಲ್ಲೂ ಸಾಕಷ್ಟು ಭಕ್ತರಿದ್ದಾರೆ ಎಂದರು.

ಅನ್ನ ದಾಸೋಹ, ಜ್ಞಾನ ದಾಸೋಹ, ವಸತಿ ಸೇರಿದಂತೆ ಉತ್ತಮ ಕೆಲಸಗಳನ್ನು ಶ್ರೀ ಶೈಲ ಮಠ ಮಾಡುತ್ತಿದೆ. ವರ್ಷದ 365 ದಿನಗಳ ಕಾಲವೂ ಪ್ರವಾಸದಲ್ಲಿರುವ ಶ್ರೀಗಳು ಸದಾ ಸಮಾಜಮುಖಿ ಕೆಲಸಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ನಾವೂ ಸಹ ಮಠಕ್ಕೆ ಎಂದಿಗೂ ಚಿರಋಣಿಯಾಗಿರುತ್ತೇವೆ ಎಂದು ಹೇಳಿದರು.

ಮಹಾನಗರ ಪಾಲಿಕೆ ಮಾಜಿ ಮೇಯರ್ ಬಿ.ಜೆ. ಅಜಯ್ ಕುಮಾರ್ ಮಾತನಾಡಿ, ದೇಶದಲ್ಲಿನ ಸುಮಾರು ಮೂರು ಸಾವಿರ ಜಗದ್ಗುರುಗಳು ದೇಶದ ಪರಂಪರೆ ಹಾಗೂ ಸಂಸ್ಕೃತಿಯನ್ನು ಉಳಿಸಿ, ಬೆಳೆಸುವ ಕೆಲಸ ಮಾಡುತ್ತಿದ್ದಾರೆ. ಅದರಲ್ಲೂ ಶ್ರೀಶೈಲ ಪೀಠವು ರಾಜಕಾರಣಿಗಳಿಗಿಂತ ಹೆಚ್ಚು ಜನ ಸೇವೆ ಮಾಡುತ್ತಿದೆ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ, ಶ್ರೀಶೈಲ ಮಠವು ಸರ್ಕಾರ ಮಾಡಬೇಕಾದ ಕೆಲಸಗಳನ್ನು ಮಾಡುತ್ತಿದೆ. ಸಮಾಜ ಸೇವೆಗೆ ಸ್ಫೂರ್ತಿ ತುಂಬುವ ಕೆಲಸ ಮಾಡುತ್ತಿದೆ ಎಂದು ಹೇಳಿದರು.

ಮುಷ್ಠೂರು ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ, ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ಬಸವನ ಬಾಗೇವಾಡಿಯ ಶ್ರೀ ಒಡೆಯರ ಶಿವಪ್ರಕಾಶ ಶಿವಾಚಾರ್ಯ ಸ್ವಾಮೀಜಿ, ಅಕ್ಕಿಆಲೂರು ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಸರಗೀಶ್ವರ ಸಂಸ್ಥಾನಮಠದ ಶ್ರೀ ಗುರುಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ, ಅ.ಭಾ. ವೀರಶೈವ ಮಹಾಸಭಾ ಹರಿಹರ ಅಧ್ಯಕ್ಷ ಡಿ.ಬಿ. ಶಿವಾನಂದಪ್ಪ, ಹಾಲಸ್ವಾಮಿ, ಎನ್.ಎ. ಮುರುಗೇಶ್ ಇತರರು ಉಪಸ್ಥಿತರಿದ್ದರು.

'ಅಧ್ಯಾತ್ಮಿಕತೆ ಹಾಗೂ ಜಗದ್ಗುರುಗಳು' ಕುರಿತು ಜಗನ್ನಾಥ ನಾಡಿಗೇರ ಉಪನ್ಯಾಸ ನೀಡಿದರು. ಲೆಕ್ಕಪರಿಶೋಧಕ ರಾಧೇಶ್ ಜಂಬಗಿ ಸ್ವಾಗತಿಸಿದರು. ಸೌಭಾಗ್ಯ ಎಸ್. ಹಿರೇಮಠ್ ನಿರೂಪಿಸಿದರು. ಕೆ.ಎಂ. ಪರಮೇಶ್ವರಯ್ಯ ವಂದಿಸಿದರು.

# ಬೆಣ್ಣೆನಗರಿಯಲ್ಲಿ 'ಕ್ರಾಂತಿ' ಹವಾ

## ಪೋಸ್ಟರ್ ಬಿಡುಗಡೆ ಮಾಡಿದ ಗಡಿಗುಡಾಳ್ ಮಂಜುನಾಥ್



ದಾವಣಗೆರೆ, ಸೆ. 6- ಚಾಲೆಂಜಿಂಗ್ ಸ್ಟಾರ್ ದರ್ಶನ್ ಅಭಿನಯದ 'ಕ್ರಾಂತಿ' ಸಿನಿಮಾ ಸಾಕಷ್ಟು ಕ್ರೇಜ್ ಉಂಟು ಮಾಡಿದೆ. ಸ್ಯಾಂಡಲ್ ವುಡ್ ನಲ್ಲಿ ಸಂಚಲನ ಸೃಷ್ಟಿಸಿರುವ ಈ ಚಿತ್ರದ ಪ್ರಮೋಷನ್ ಅನ್ನು ದರ್ಶನ್ ಅಭಿಮಾನಿಗಳು ಎಲ್ಲೆಡೆ ಮಾಡತೊಡಗಿದ್ದಾರೆ. ದಾವಣಗೆರೆಯಲ್ಲಿಯೂ ಚಾಲೆಂಜಿಂಗ್ ಸ್ಟಾರ್ ಅಭಿಮಾನಿಗಳ ಸಮ್ಮುಖದಲ್ಲಿ ಬಿಡುಗಡೆ ಮಾಡಲಾಯಿತು.

ಎಂಸಿಸಿ ಬಿ ಬ್ಲಾಕ್ ನ ಪುನೀತ ಆನಂದ ವನದ ಗಣಪತಿ ಮೂರ್ತಿ ಎದುರು ಮಹಾನಗರ ಪಾಲಿಕೆಯ ವಿರೋಧ ಪಕ್ಷದ ನಾಯಕ ಗಡಿಗುಡಾಳ್ ಮಂಜುನಾಥ್ ಬಿಡುಗಡೆಗೊಳಿಸಿದರು.

ಈ ವೇಳೆ ಮಾತನಾಡಿದ ಅವರು, ಅಭಿಮಾನಿಗಳ ಪಾಲಿಗೆ ದರ್ಶನ್ ಎಂದರೆ ಆರಾಧ್ಯ ದೈವ. ಕ್ರಾಂತಿ ಸಿನಿಮಾವಂತೂ ಸಾಕಷ್ಟು ಕುತೂಹಲ ಮೂಡಿಸಿದೆ. ಈ ಚಿತ್ರದಲ್ಲಿ ಕ್ರೇಜಿಸ್ಟಾರ್ ರವಿಚಂದ್ರನ್ ಸೇರಿದಂತೆ ದೊಡ್ಡ ತಾರಾಗಣವೇ ಇದೆ. ದರ್ಶನ್ ಅಭಿನಯ ಅಂದರೆ ಸಾಕು ಫ್ಯಾನ್ಸ್ ಪಾಲಿಗೆ ಎಲ್ಲಿಲ್ಲದ ಸಂಭ್ರಮ. ದರ್ಶನ್ ಸಿನಿಮಾ ಬಿಡುಗಡೆಯಾದರೆ ಹಬ್ಬದಂತೆ ಅಭಿಮಾನಿಗಳು ಆಚರಿಸುತ್ತಾರೆ ಎಂದು ಹೇಳಿದರು.

ಅಭಿಮಾನಿಗಳ ಪಾಲಿಗೆ ದಾಸ. ಅಭಿನಯಕ್ಕೆ ಬಂದರೆ ದರ್ಶನ್‌ಗೆ ಅವರೇ ಸಾಟಿ. ದರ್ಶನ್ ತೂಗುದೀಪ ಅಭಿನಯದ ಯಾವ ಸಿನಿಮಾ ಬಿಡುಗಡೆಯಾದರೂ ಅಭಿಮಾನಿಗಳು ಅದ್ಧೂರಿಯಾಗಿ ಬರಮಾಡಿಕೊಳ್ಳುತ್ತಾರೆ. ಚಿತ್ರ ವೀಕ್ಷಿಸಲು ರಾತ್ರಿಯಿಂದಲೇ ಸಾಲು ಸಾಲಿನಲ್ಲಿ ನಿಂತು ಟಿಕೆಟ್ ಪಡೆಯುತ್ತಾರೆ. ಅಷ್ಟೊಂದು ಕ್ರೇಜ್ ದರ್ಶನ್ ಗೆ ಇದೆ ಎಂದು ತಿಳಿಸಿದರು.

ಈ ವೇಳೆ ಕಾಂಗ್ರೆಸ್ ಮುಖಂಡರಾದ ಮುದೇಗೌಡ್ರು ಗಿರೀಶ್, ಮಾಗಾನಹಳ್ಳಿ ಪರಶುರಾಮ್, ಜಿ.ಪಂ. ಮಾಜಿ ಸದಸ್ಯ ಕರಿಬಸಪ್ಪ, ಮಹಾಂತೇಶ್, ಅಶೋಕ್, ಮೋಹನ್, ನಿಖಿಲ್, ಪ್ರಮೋದ್, ಶಿವಣ್ಣ, ವಿನಾಯಕ ಗೆಳೆಯರ ಬಳಗದವರು ಹಾಗೂ ದರ್ಶನ್ ಅಭಿಮಾನಿಗಳು ಹಾಜರಿದ್ದರು.

# ಇಂದು ಯಕ್ಷಗಾನ ಪ್ರದರ್ಶನ

ಹಿಂದೂ ಮಹಾಗಣಪತಿ ಟ್ರಸ್ಟ್‌ನ ಆಶ್ರಯದಲ್ಲಿ ಉಡುಪಿ ಜಿಲ್ಲೆಯ ಮಂದಾರ್ತಿಯ ಶ್ರೀ ಮಹಾಗಣಪತಿ ಯಕ್ಷಗಾನ ಮಂಡಳಿಯ ನುರಿತ ವೃತ್ತಿ ನಿರತ ಯಕ್ಷಗಾನ ಕಲಾವಿದರಿಂದ ನಡೆಯುವ ಯಕ್ಷಗಾನ ಪ್ರದರ್ಶನವು ಇಂದು ಸಂಜೆ 5.30ಕ್ಕೆ ಹೈಸ್ಕೂಲ್ ಮೈದಾನದ ಬಯಲು ರಂಗ ಮಂದಿರದಲ್ಲಿ ನಡೆಯಲಿದೆ ಎಂದು ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಬೇಳೂರು ಸಂತೋಷ್ ಕುಮಾರ ಶೆಟ್ಟಿ ತಿಳಿಸಿದ್ದಾರೆ.

ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಅಂಗ ಸಂಸ್ಥೆ ಯಕ್ಷರಂಗ ಯಕ್ಷಗಾನ ಸಂಸ್ಥೆಯ ಸಹಯೋಗದಲ್ಲಿ ನಡೆಯುವ ಈ ಸಮಾರಂಭವನ್ನು ನಾಡಿನ ಹೆಸರಾಂತ ಯಕ್ಷಗಾನ ಭಾಗವತರಾದ ಉಡುಪಿ ಜಿಲ್ಲೆಯ ನಡೂರಿನ ಕೊಕ್ಕರ್ಣೆ ಸದಾಶಿವ ಅಮೀನ್ ಉದ್ಘಾಟಿಸಲಿದ್ದಾರೆ. ಅಧ್ಯಕ್ಷತೆಯನ್ನು ಜೊಳ್ಳಿ ಗುರು ವಹಿಸಿಕೊಳ್ಳಲಿದ್ದು, ಮುಖ್ಯ ಅತಿಥಿಗಳಾಗಿ ಬಿ.ಜೆ. ಅಜಯಕುಮಾರ್, ಬಸವರಾಜ್ ಶಿವಗಂಗಾ, ಶ್ರೀನಿವಾಸ್ ದಾಸಕರಿಯಪ್ಪ, ಜೆ.ಈಶ್ವರ್‌ಸಿಂಗ್, ಸಾಲಿಗ್ರಾಮ ಗಣೇಶ್ ಶೆಣೈ, ಮಲ್ಯಾಡಿ ಪ್ರಭಾಕರ ಶೆಟ್ಟಿ, ಕೆ.ಹೆಚ್.ಮಂಜುನಾಥ್, ಶ್ರೀಮತಿ ಹೇಮಾ ಶಾಂತಪ್ಪ ಪೂಜಾರಿ ಆಗಮಿಲಿಸಲಿದ್ದಾರೆ ಎಂದು ಭಾಸ್ಕರ ನಾಯಕ್ ತಿಳಿಸಿದ್ದಾರೆ. ಸಭಾ ಕಾರ್ಯಕ್ರಮದ ನಂತರ 'ವೀರ ಅಭಿಮನ್ಯು' ಪೌರಾಣಿಕ ಕಥಾನಕದ ಯಕ್ಷಗಾನವಿದೆ.

# ನಂದಗೋಕುಲದಲ್ಲಿ ಶಿಕ್ಷಕರ ದಿನಾಚರಣೆ



ದಾವಣಗೆರೆ, ಸೆ. 6- ನಗರದ ನಂದಗೋಕುಲ ಶಾಲೆಯಲ್ಲಿ ನಡೆದ ಶಿಕ್ಷಕರ ದಿನಾಚರಣೆಯಲ್ಲಿ ವಿದ್ಯಾರ್ಥಿಗಳು ಶಿಕ್ಷಕರುಗಳಿಗೆ ಕ್ರೀಡಾ ಸ್ಪರ್ಧೆ ಏರ್ಪಡಿಸಿದ್ದರು. ಈ ಸಂದರ್ಭದಲ್ಲಿ ವಿಜೇತರಾದ ಶಿಕ್ಷಕರುಗಳಿಗೆ ಬಹುಮಾನ ವಿತರಣೆ ಮತ್ತು ಶಿಕ್ಷಕ ವೃಂದದವರಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ನೆನಪಿನ ಕಾಣಿಕೆ ನೀಡಲಾಯಿತು.

# ರಸ್ತೆಗಳಲ್ಲಿನ ಗುಂಡಿಗಳು ಕಣ್ಣಿಗೆ ಕಂಡರೂ ಕಾಣದಂತೆ ವರ್ತಿಸುತ್ತಿರುವ ಅಧಿಕಾರಿಗಳ ವಿರುದ್ಧ ಆಕ್ರೋಶ

ಹರಪನಹಳ್ಳಿ, ಸೆ.6- ರಸ್ತೆಯಲ್ಲಿ ಗುಂಡಿಗಳು ಬಿದ್ದರೂ ಕಣ್ಣಿಗೆ ಕಾಣದಂತೆ ವರ್ತಿಸುವ ಹಾಗೂ ಸವಾರರು ಬೆನ್ನು ಮೂಳೆಗಳು ಮುರಿಯಲಿಕ್ಕೆ ಕಾರಣಕರ್ತರಾದ ಸಂಬಂಧಪಟ್ಟ ಅಧಿಕಾರಿಗಳಿಗೆ ರಸ್ತೆ ದುರಸ್ತಿ ಮಾಡುವಂತೆ ಆಗ್ರಹಿಸಿ, ಪ್ರತಿಭಟನೆ ನಡೆಸಿದರು.



ಕಮ್ಯುನಿಸ್ಟ್ ಮತ್ತು ರೈತ ಸಂಘಟನೆಯಿಂದ ಹರಪನಹಳ್ಳಿಯಲ್ಲಿ ಪ್ರತಿಭಟನೆ

ಹರಪನಹಳ್ಳಿ ತಾಲ್ಲೂಕು ವಿಜಯನಗರ ಜಿಲ್ಲೆಯಲ್ಲಿ ಅತಿ ಹೆಚ್ಚು ಹಳ್ಳಿಗಳು ಅತಿ ಹೆಚ್ಚು ಗ್ರಾಮ ಪಂಚಾಯತಿಗಳು ವಿದ್ಯಾ ಕಾಶಿಗೆ ಹೆಸರುವಾಸಿಯಾದ ತಾಲ್ಲೂಕು ಆಗಿರುತ್ತದೆ. ನಗರದಲ್ಲಿ ತರಕಾರಿ ಮಾರುಕಟ್ಟೆ, ಕುರಿ ಸಂತೆ, ಎಪಿಎಂಸಿ ಮಾರುಕಟ್ಟೆಗಳಿಗೆ ಅತಿ ಹೆಚ್ಚು ವಾಹನಗಳು ಚಲಿಸುವ ಪಟ್ಟಣವಾಗಿರುತ್ತದೆ.

ಪಟ್ಟಣಕ್ಕೆ ಬರುವ ಬೇರೆ ಬೇರೆ ಜಿಲ್ಲೆಯವರು ನಮ್ಮ ಹರಪನಹಳ್ಳಿಯ ರಸ್ತೆ ನೋಡಿ ಸಂಬಂಧಿಸಿದ ಅಧಿಕಾರಿಗಳಿಗೆ, ರಾಜಕಾರಣಿಗಳಿಗೆ ಹಿಡಿ ಶಾಪ ಹಾಕುತ್ತಿದ್ದಾರೆ. ದಿನಂಪ್ರತಿ ಓಡಾಡುವ ಸವಾರರು ಪಟ್ಟಣದ ರಸ್ತೆಗಳಲ್ಲಿ ನೂರಾರು ಜೀವ ಹಾನಿಗಳು ಆಗಿವೆ. ಕೈ-ಕಾಲು ಮುರಿದುಕೊಂಡು, ಬೆನ್ನು-ಮೂಳೆ ಮುರಿದುಕೊಂಡು ಅಂಗವಿಕಲರಾಗಿದ್ದಾರೆ. ಅಧಿಕಾರಿಗಳು ತಾಲ್ಲೂಕಿನ ಶಾಸಕರು ನಿರ್ಲಕ್ಷ್ಯ ಮಾಡುತ್ತಿದ್ದಾರೆ.

ವಾಹನ ಸಹಾರರು ದಿನ ಪ್ರತಿ ಡೀಸೆಲ್ - ಪೆಟ್ರೋಲ್ ವಾಹನದ ಬಿಡಿ ಭಾಗಗಳಿಗೆ ರಸ್ತೆಗಾಗಿ ತೆರಿಗೆ ಜಿಎಸ್‌ಟಿ ಕಟ್ಟಿದ್ದರೂ ಸಹ ಈ ಹಣದಲ್ಲಿ ರಸ್ತೆ ಅಭಿವೃದ್ಧಿ ಮಾಡದೇ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು 40 ಪರ್ಸೆಂಟ್ ನಿಂದ 50 ಪರ್ಸೆಂಟ್ ಕಮೀಷನ್ ಹೊಡೆದು ರಾಜರಂತೆ ಮೆರೆಯುತ್ತಿದ್ದಾರೆ. ಹರಪನಹಳ್ಳಿ ಹೋರಾಟದ ನೆಲ. ನಿಮ್ಮ ವಿಳಂಬ - ನಿರ್ಲಕ್ಷ್ಯ ಮಾಡುವುದನ್ನು ಖಂಡಿಸಿ, ರಸ್ತೆ ತಡೆಯ ಹೋರಾಟದ ಎಚ್ಚರಿಕೆ ನೀಡುತ್ತಿದ್ದೇವೆ. ಪಟ್ಟಣದಲ್ಲಿರುವ ಮುಖ್ಯ ರಸ್ತೆಗಳನ್ನು ದುರಸ್ತಿ ಮಾಡಬೇಕು. ಇಲ್ಲದಿದ್ದರೆ ಹರಪನಹಳ್ಳಿಯ ಹೋರಾಟಗಾರರು ಶಾಂತಿಗೂ ಬದ್ಧ, ಕ್ರಾಂತಿಗೆ ಸಿದ್ಧ. ಮುಂದಿನ ದಿನಗಳಲ್ಲಿ ರಾಜಕಾರಣಿಗಳೇ ರಸ್ತೆ ಮಾಡಿ, ಇಲ್ಲಾ ಕುರ್ಚಿ ಖಾಲಿ ಮಾಡಿ ಹೋರಾಟ ಮಾಡಬೇಕಾಗುತ್ತದೆ.

**ಬೇಡಿಕೆಗಳು** : ಪಟ್ಟಣದಲ್ಲಿರುವ ಮುಖ್ಯರಸ್ತೆಗಳು ಪಟ್ಟಣದ ಒಳಗಡೆ ಇರುವ ಎಲ್ಲಾ ರಸ್ತೆಗಳನ್ನು ಕೂಡಲೇ ದುರಸ್ತಿ ಮಾಡಲೇಬೇಕು ಹಾಗೂ ಹರಪನಹಳ್ಳಿಯಿಂದ ಬೆಂಡಿಕೇರಿ, ದುಗ್ಗಾವತಿ, ಕೊಟ್ಟೂರು, ಹೊಳಲು, ಹೊಸಪೇಟೆ ಮಾರ್ಗವಾಗಿ ಇರುವ ರಸ್ತೆಗಳನ್ನು ದುರಸ್ತಿ ಮಾಡಬೇಕು ಎಂದು ಒತ್ತಾಯಿಸಿದರು.

# ಬಿರು ಮಳೆಯಿಂದ ಬುಳ್ಳಾಪುರ ಗ್ರಾಮದ ಮನೆಗಳಿಗೆ ನುಗ್ಗಿದ ನೀರು



ಹರಿಹರ

ಹರಿಹರ, ಸೆ. 6 - ತಾಲ್ಲೂಕಿನ ಕೊಂಡಜ್ಜಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಬುಳ್ಳಾಪುರ ಗ್ರಾಮದಲ್ಲಿ ಸೋಮವಾರ ಸಂಜೆ ಒಂದೂವರೆ ತಾಸು ಸುರಿದ ಮಳೆಗೆ ಹಲವಾರು ಮನೆಗಳಿಗೆ ನೀರು ನುಗ್ಗಿದೆ.

ಗ್ರಾಮದ ಪೂರ್ವ ಭಾಗದ ಕೊಂಡಜ್ಜಿ ಗುಡ್ಡ ಪ್ರದೇಶದಲ್ಲಿ ಧಾರಾಕಾರವಾಗಿ ಸುರಿದ ಪರಿಣಾಮ ಹತ್ತಾರು ಮನೆಗಳಿಗೆ ನೀರು ನುಗ್ಗಿದ್ದು, ವಸ್ತುಗಳು ಹಾನಿಗೀಡಾಗಿ, ನಾಗರಿಕರು ಪರದಾಡುವಂತಾಗಿದೆ.

ರಾತ್ರಿ 12 ಘಂಟೆಗೆ ತಹಶೀಲ್ದಾರ್ ಎಂ.ಬಿ. ಅಶ್ವತ್ಥ್ ಹಾಗೂ ತಾಲ್ಲೂಕು ಆಡಳಿತ ಅಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿ, ಗ್ರಾಮಸ್ಥರಿಗೆ ನೆರವಾಗಲು ಕ್ರಮ ತೆಗೆದುಕೊಂಡಿದ್ದಾರೆ.

ಈ ಸಂದರ್ಭದಲ್ಲಿ ತಾಲ್ಲೂಕು ಆಡಳಿತದ ಸಿಬ್ಬಂದಿಗಳಾದ ಹೆಚ್.ಜಿ. ಹೇಮಂತ್ ಕುಮಾರ್, ಸಮೀರ್ ಇತರರು ಹಾಜರಿದ್ದರು.

# ಕಲ್ಪತರು ಕ್ರೆಡಿಟ್ ಸೊಸೈಟಿ ಅಧ್ಯಕ್ಷರಾಗಿ ಜಗದೀಶ್



ದಾವಣಗೆರೆ, ಸೆ. 6 - ನಗರದ ಶ್ರೀ ಕಲ್ಪತರು ಕ್ರೆಡಿಟ್ ಕೋ ಆಪ್. ಸೊಸೈಟಿ ಅಧ್ಯಕ್ಷರಾಗಿ ಡಿ.ಎನ್.ಜಗದೀಶ್, ಉಪಾಧ್ಯಕ್ಷರಾಗಿ ಟಿ.ಗೋಪಿನಾಥ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಎಂ. ಭೈರಪ್ಪ ಅವರ ನಿಧನದಿಂದಾಗಿ ಅಧ್ಯಕ್ಷ ಸ್ಥಾನ ತೆರವಾಗಿತ್ತು. ರಿಟರ್ನಿಂಗ್ ಅಧಿಕಾರಿ ಹಾಗೂ ಸಹಕಾರ ಸಂಘಗಳ ಸಹಕಾರ ಅಭಿವೃದ್ಧಿ ಅಧಿಕಾರಿ ಜಿ.ಎಸ್.ಸುರೇಂದ್ರ ಅವರು ಘೋಷಣೆ ಮಾಡಿದರು. ಸೊಸೈಟಿಯ ಮಾಜಿ ಅಧ್ಯಕ್ಷರುಗಳಾದ ತಿಮ್ಮಯ್ಯ, ಬಿ.ಎನ್. ಮಲ್ಲೇಶ್, ಶ್ರೀಮತಿ ಶ್ರೀಲತಾ ಕೈಷ್ಣೇ ಗೌಡರು, ನಿರ್ದೇಶಕರುಗಳಾದ ಜ್ಯೋತಿ ಪ್ರಸನ್ನ ಕುಮಾರ್, ಸಿ. ಕಪನಿಗೌಡ, ಎಸ್.ನಾಗರಾಜ್, ಡಿ ಭಾಸ್ಕರ್, ಸಿ.ನಿಂಗೇಶ್, ಎಸ್.ಸುಧಾ, ಚಿದಾನಂದ, ಹೆಚ್. ಶಕುಂತಲ, ವೆಂಕಟೇಶ್ ಹಾಗೂ ಸೊಸೈಟಿ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಡಿ.ಆರ್.ಶ್ರೀನಿವಾಸ್ ಉಪಸ್ಥಿತರಿದ್ದರು.


॥ ಶ್ರೀ ಕೊಟ್ಟೂರೇಶ್ವರ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**


**ಶ್ರೀ ಟಿ. ಕೊಟ್ರೇಶ್,** ತೆರಿಗೆ ಸಲಹೆಗಾರರು, ದಾವಣಗೆರೆ.
ಇವರು ಮಾಡುವ ವಿಜ್ಞಾಪನೆಗಳು.
ನನ್ನ ಪುತ್ರ **ಟಿ.ಕೆ. ಗುರುಬಸವರಾಜ್** ಇವರ ಧರ್ಮಪತ್ನಿ
**ಶ್ರೀಮತಿ ಶಿಲ್ಪಾ** ಇವರು
ದಿನಾಂಕ 04.09.2022 ನೇ ಭಾನುವಾರ ಬೆಳಿಗ್ಗೆ 7.45ಕ್ಕೆ ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **'ಕೈಲಾಸ ಶಿವಗಣಾರಾಧನೆ'**ಯನ್ನು **ದಿನಾಂಕ 8.9.2022ನೇ ಗುರುವಾರ** ಮಧ್ಯಾಹ್ನ 12.30ಕ್ಕೆ ಎಂಸಿಸಿ 'ಎ' ಬ್ಲಾಕ್‌ನಲ್ಲಿರುವ **ಶ್ರೀ ಸುಕೃತೀಂದ್ರ ಕಲಾ ಮಂದಿರದಲ್ಲಿ** ನೆರವೇರಿಸಲು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ,

ಇಂತಿ ದುಃಖತಪ್ತರು : **ಟಿ. ಕೊಟ್ರೇಶ್ ಮತ್ತು ಮಕ್ಕಳು, ತಡಕನಹಳ್ಳಿ ವಂಶಸ್ಥರು, ಅವಲಕ್ಕಿ ವಂಶಸ್ಥರು, ಚಿಂದೋಡಿ ವಂಶಸ್ಥರು ಹಾಗೂ ಬಂಧು-ಮಿತ್ರರು.**

ವಿ.ಸೂ. : ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.




## ಮಲೇಬೆನ್ನೂರಿಗೆ ಇಂದು ಬಿ.ಎಸ್. ಯಡಿಯೂರಪ್ಪ



ನೀರಾವರಿ ಇಲಾಖೆ ಆವರಣದಲ್ಲಿ ಪ್ರತಿಷ್ಠಾಪಿಸಿರುವ ಹಿಂದೂ ಮಹಾಗಣಪತಿ ಸನ್ನಿಧಾನಕ್ಕೆ ಇಂದು ಸಂಜೆ 5 ಕ್ಕೆ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರ ಭೇಟಿ ನೀಡಲಿದ್ದಾರೆ ಎಂದು ಹಿಂದೂ ಮಹಾಗಣಪತಿ ಸಮಿತಿ ಅಧ್ಯಕ್ಷ ವೈ. ಚಂದ್ರಶೇಖರ್, ಪುರಸಭೆ ಸದಸ್ಯ ಪಿ.ಆರ್.ರಾಜು ತಿಳಿಸಿದ್ದಾರೆ.

# ಸಚಿವ ಉಮೇಶ್ ಕತ್ತಿ ಇನ್ನಿಲ್ಲ

**(1ನೇ ಪುಟದಿಂದ)** ಆಸ್ಪತ್ರೆಗೆ ದಾಖಲಿಸಿ, ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಯಿತು. ಆದರೆ, ಚಿಕಿತ್ಸೆಗೆ ಸ್ಪಂದಿಸದ ಉಮೇಶ್ ಕತ್ತಿ ಕೊನೆಯುಸಿರೆಳೆದಿದ್ದಾರೆ.

ಬೆಳಗಾವಿಯ ಹುಕ್ಕೇರಿ ವಿಧಾನಸಭಾ ಕ್ಷೇತ್ರದಿಂದ ಕತ್ತಿ ಅವರು ಎಂಟು ಬಾರಿ ಆರಿಸಿ ಬಂದಿದ್ದಾರೆ. ಕತ್ತಿ ನಿಧನಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶೋಕ ವ್ಯಕ್ತಪಡಿಸಿದ್ದು, ಅವರ ನಿಧನದಿಂದ ರಾಜ್ಯ ಓರ್ವ ನುರಿತ ಮುತ್ಸದ್ದಿ, ಕ್ರಿಯಾಶೀಲ ಮುಖಂಡ ಹಾಗೂ ನಿಷ್ಠಾವಂತ ಜನಸೇವಕನನ್ನು ಕಳೆದುಕೊಂಡಿದೆ ಎಂದಿದ್ದಾರೆ. ಉಮೇಶ್ ಕತ್ತಿ ಅವರ ಅಕಾಲಿಕ ನಿಧನದಿಂದ ತೀವ್ರ ದುಃಖಿತನಾಗಿದ್ದೇನೆ. ಅವರ ಅಗಲಿಕೆಯ ದುಃಖವನ್ನು ಸಹಿಸುವ ಶಕ್ತಿಯನ್ನು ಆ ಭಗವಂತ ಅವರ ಕುಟುಂಬಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇನೆ ಎಂದು ಬೊಮ್ಮಾಯಿ ಹೇಳಿದ್ದಾರೆ.

ಆಸ್ಪತ್ರೆಯ ಸಮೀಪ ಮಾತನಾಡಿದ ಕಂದಾಯ ಸಚಿವ ಆರ್.ಅಶೋಕ್, ಆಸ್ಪತ್ರೆಗೆ ಬರುವುದಕ್ಕೆ ಮುನ್ನವೇ ಪಲ್ಸ್ ನಿಂತಿತ್ತು. ಅವರನ್ನು ಉಳಿಸಲು ಸುಮಾರು ಅರ್ಧ ತಾಸು ವೈದ್ಯರು ಪ್ರಯತ್ನ ಮಾಡಿದ್ದಾರೆ. ಈ ಹಿಂದೆ ಎರಡು ಬಾರಿ ಅವರಿಗೆ ಹೃದಯಾಘಾತ ಆಗಿತ್ತು ಎಂದು ತಿಳಿಸಿದ್ದಾರೆ.

ಉಮೇಶ್ ಕತ್ತಿ ನಿಧನರಾದ ವಿಷಯ ತಿಳಿಯುತ್ತಿದ್ದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿದಂತೆ ಬಿಜೆಪಿ ನಾಯಕರ ದಂಡು ಎಂ. ಎಸ್. ರಾಮಯ್ಯ ಆಸ್ಪತ್ರೆಯತ್ತ ದೌಡಾಯಿಸುತ್ತಿದ್ದಾರೆ. ಆರೋಗ್ಯ ಸಚಿವ ಡಾ.ಕೆ ಸುಧಾಕರ್, ಕಂದಾಯ ಸಚಿವ ಆರ್. ಅಶೋಕ್ ಈಗಾಗಲೇ ಆಸ್ಪತ್ರೆಗೆ ಭೇಟಿ ನೀಡಿದ್ದಾರೆ. ಬೆಳಗಾವಿ ಜಿಲ್ಲೆಯ ಹುಕ್ಕೇರಿ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದ ಕತ್ತಿ ಅವರು, ನಾಲ್ಕು ಬಾರಿ ಅವರು ಸಚಿವರಾಗಿದ್ದರು.

1985ರಲ್ಲಿ ರಾಜಕೀಯಕ್ಕೆ ಕಾಲಿರಿಸಿದ್ದ ಕತ್ತಿ, ಆರು ಬಾರಿ ಪಕ್ಷಗಳನ್ನು ಬದಲಿಸಿದ್ದಾರೆ. 1985ರಲ್ಲಿ ಅವರು ಜನತಾ ಪಕ್ಷದಿಂದ ಮೊದಲ ಬಾರಿಗೆ ಶಾಸನ ಸಭೆಗೆ ಆಯ್ಕೆಯಾಗಿದ್ದರು. 2013 ಮತ್ತು 2018ರಲ್ಲಿ ಬಿಜೆಪಿಯಿಂದ ಅವರು ವಿಧಾನಸಭೆಗೆ ಪ್ರವೇಶಿಸಿದ್ದರು. 2004ರ ಚುನಾವಣೆ ಹೊರತುಪಡಿಸಿದರೆ, ಅವರು ಯಾವತ್ತೂ ಸೋಲು ಕಂಡವರಲ್ಲ.

ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯದ ಬಗ್ಗೆ ಉಮೇಶ್ ಕತ್ತಿ ಸ್ಪಷ್ಟ ನಿಲುವು ಹೊಂದಿದ್ದರು. ಪಕ್ಷದ ಆದೇಶ ಹಾಗೂ ನಿಲುವಿನ ವಿರುದ್ಧವಾಗಿ ಆಗಾಗ ಧ್ವನಿ ಎತ್ತುತ್ತಲೇ ಇದ್ದರು. ಭವಿಷ್ಯದಲ್ಲಿ ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯವಾಗಲಿದೆ, ಆ ರಾಜ್ಯಕ್ಕೆ ನಾನೇ ಮೊದಲ ಮುಖ್ಯಮಂತ್ರಿಯಾಗುತ್ತೇನೆ ಎಂದು ಆಗಾಗ ಮಾಧ್ಯಮದೆದುರು ಹೇಳಿಕೆ ನೀಡುತ್ತಿದ್ದರು.


॥ ಶ್ರೀ ಉಕ್ಕುಂದ ಬಸವೇಶ್ವರ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ**



**ಶ್ರೀ ರುದ್ರಮುನಿ ಗೂಳಪ್ಪ ಹುಲಮನಿ ಮತ್ತು ಸಹೋದರರು**
ಸಾ: ಉಕ್ಕುಂದ ಹಾಲಿವಸ್ತಿ, ರಾಣೇಬೆನ್ನೂರು ಜಿ., ಹಾವೇರಿ.
**ಇವರು ಮಾಡುವ ವಿಜ್ಞಾಪನೆಗಳು.**
ನಮ್ಮ ಪೂಜ್ಯ ತಂದೆಯವರಾದ
**ಶ್ರೀ ಗೂಳಪ್ಪ ಚನಬಸಪ್ಪ ಹುಲಮನಿ**
(94 ವರ್ಷ) ಇವರು ದಿನಾಂಕ :04.09.2022 ನೇ ರವಿವಾರ ಮಧ್ಯಾಹ್ನ 2.20 ಗಂಟೆಗೆ ಕೈಲಾಸವಾಸಿಗಳಾದರೆಂದು ತಿಳಿಸಲು ವಿಷಾದಿಸುತ್ತೇವೆ. ಕಾರಣ ಮೃತರ ಆತ್ಮಶಾಂತಿಗಾಗಿ
**"ಕೈಲಾಸ ಶಿವಗಣಾರಾಧನೆ"ಯನ್ನು**
ದಿನಾಂಕ: 08.09.2022 ನೇ ಗುರುವಾರ ಮಧ್ಯಾಹ್ನ 12.00 ಗಂಟೆಗೆ ಹೊಸನಗರ, ಗುಪ್ತಾ ಹೈಸ್ಕೂಲ್ ರಸ್ತೆ, ರಾಣೇಬೆನ್ನೂರಿನ ನಮ್ಮ ಸ್ವಗೃಹದಲ್ಲಿ ನೆರವೇರಿಸಲು ನಿಶ್ಚಯಿಸಲಾಗಿದೆ. ಕಾರಣ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು:
**ಸಹೋದರರು, ಸಹೋದರಿ, ಅಳಿಯಂದಿರು, ಸೊಸೆಯಂದಿರು, ಮಕ್ಕಳು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗ ಫೋ. : 70224 60469**

ವಿ.ಸೂ. : ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.



**ತೃತೀಯ ವರ್ಷದ ಪುಣ್ಯಸ್ಮರಣೆ**



**ದಿ. ಪಿ.ಕೆ. ಬಸವರಾಜಪ್ಪನವರು**
(ಕೃಷಿ ಮಾರುಕಟ್ಟೆ ನಿವೃತ್ತ ಅಧಿಕಾರಿಗಳು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ದಾವಣಗೆರೆ)
**ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ ಮತ್ತು ನೀವು ಹಾಕಿ ಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ.**

ಇಂತಿ ದುಃಖತಪ್ತರು : **ಶ್ರೀಮತಿ ಯಶೋಧಮ್ಮ ಮತ್ತು ಮಕ್ಕಳು ಪಟೇಲ್ ವಂಶಸ್ಥರು, ಕಬ್ಬೂರು ಹಾಗೂ ಬಂಧು-ಮಿತ್ರರು.**
**ಮೊ: 99011 22899**



**ದ್ವಿತೀಯ ವರ್ಷದ ಚಿರಸ್ಮರಣೆ**



**ದಿ॥ ಜಗದೀಶ್ ಶೆಟ್ಟಪ್ಪನವರ್**
ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು...
(07.09.2022)
ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಾ ನಿಮ್ಮ ಸ್ಮರಣೆಯಲ್ಲಿರುವ
**ಪತ್ನಿ, ಮಕ್ಕಳು, ಸಹೋದರಿಯರು, ಸಹೋದರರು ಹಾಗೂ ಬಂಧು-ಮಿತ್ರರು, ದಾವಣಗೆರೆ.**


# ನದಿಯಲ್ಲಿ ಕಣ್ಮರೆಯಾಗಿದ್ದ ಅಕ್ಕ-ತಂಗಿ ಪೈಕಿ ತಂಗಿ ಶವ ಪತ್ತೆ

ಮಲೇಬೆನ್ನೂರು, ಸೆ.6- ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ದರ್ಶನಕ್ಕೆ ಬಂದು ತುಂಗಭದ್ರಾ ನದಿಯಲ್ಲಿ ಸ್ನಾನ ಮಾಡುತ್ತಿರುವಾಗ ನೀರಿನ ಸೆಳೆತಕ್ಕೆ ಸಿಕ್ಕು ಕೊಚ್ಚಿ ಹೋಗಿದ್ದ ಅಕ್ಕ - ತಂಗಿಯರ ಪೈಕಿ ತಂಗಿಯ ಶವ ಮಂಗಳವಾರ ನಂದಿಗಾವಿ ಬಳಿ ಇರುವ ಜಾಕ್‌ವೆಲ್ ಬಳಿ ಸಿಕ್ಕಿದೆ. ಹುಚ್ಚವ್ವನಹಳ್ಳಿಯ ವೀರಚಾರಿ ಅವರ ಪುತ್ರಿಯರಾದ ಚೈತ್ರ ಮತ್ತು ಪುಷ್ಪಾ ನದಿಯಲ್ಲಿ ಕಣ್ಮರೆಯಾಗಿದ್ದರು. ಅಗ್ನಿಶಾಮಕ ದಳ - ರಾಜ್ಯ ವಿಪತ್ತು ನಿರ್ವಹಣಾ ಪಡೆ ಜಂಟಿಯಾಗಿ ಚೈತ್ರ ಮತ್ತು ಪುಷ್ಪಾ ಅವರಿಗಾಗಿ ಕಳೆದೆರಡು ದಿನಗಳಿಂದ ನದಿಯಲ್ಲಿ ಹುಡುಕಾಟ ನಡೆಸಿದ್ದರು.

ಮಂಗಳವಾರ ಚೈತ್ರ ಅವರ ತಂಗಿ ಪುಷ್ಪಾ ಅವರ ಶವ ಪತ್ತೆಯಾಗಿದ್ದು, ಶವ ಪರೀಕ್ಷೆ ನಂತರ ಅವರ ಕುಟುಂಬದವರಿಗೆ ಶವವನ್ನು ಹಸ್ತಾಂತರ ಮಾಡಲಾಗಿದೆ ಎಂದು ಮಲೇಬೆನ್ನೂರು ಪಿಎಸ್‌ಐ ರವಿಕುಮಾರ್ ತಿಳಿಸಿದ್ದಾರೆ. ಹರಿಹರ ಸಿಪಿಐ ಸತೀಶ್ ಕುಮಾರ್, ಅಗ್ನಿ ಶಾಮಕ ದಳದ ಅಧಿಕಾರಿ ಸುಹಾಸ್ ಈ ವೇಳೆ ಹಾಜರಿದ್ದರು. ಚೈತ್ರ ಅವರ ಹುಡುಕಾಟವನ್ನು ಬುಧವಾರ ಮುಂದುವರಿಸುವುದಾಗಿ ರವಿಕುಮಾರ್ ತಿಳಿಸಿದರು.

# 90 ವರ್ಷಗಳಲ್ಲೇ ಅತಿ ಹೆಚ್ಚು ಮಳೆ

## ಸವಾಲಿನ ಸ್ಥಿತಿಯಲ್ಲಿ ಕೆಲಸ ಮಾಡುತ್ತಿದ್ದೇವೆ : ಬೊಮ್ಮಾಯಿ



ಬೆಂಗಳೂರು, ಸೆ. 6 - ಕರ್ನಾಟಕದಾದ್ಯಂತ ವಿಶೇಷವಾಗಿ ಬೆಂಗಳೂರಿನಲ್ಲಿ ಕಳೆದ 90 ವರ್ಷಗಳಲ್ಲಿ ಆಗದಷ್ಟು ಅತಿವೃಷ್ಟಿಯಾಗಿದೆ. ಸವಾಲಿನ ಪರಿಸ್ಥಿತಿಯಲ್ಲಿಯೂ ನಾವು ಕೆಲಸ ಮಾಡುತ್ತಿದ್ದೇವೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು. ಸತತವಾಗಿ ಮಳೆಯಾಗುತ್ತಿರುವುದರಿಂದ ಎಲ್ಲಾ ಕೆರೆಗಳು ತುಂಬಿದ್ದು ಕೆಲವು ಕೋಡಿ ಹರಿದಿದೆ. ಕೆಲವು ಕೆರೆಗಳು ಬಿರುಕು ಬಿಟ್ಟಿವೆ. ಇಡೀ ಬೆಂಗಳೂರು ಜಲಾವೃತವಾಗಿದೆ ಎಂದು ಬಿಂಬಿಸಲಾಗುತ್ತಿದೆ ಎಂದವರು ಹೇಳಿದರು. ಎರಡು ವಲಯಗಳು, ಅದರಲ್ಲೂ ಮಹದೇವಪುರ ವಲಯ ಸಮಸ್ಯೆಗೆ ಒಳಗಾಗಿದೆ. 69 ಕೆರೆಗಳು ಈ ಪ್ರದೇಶದಲ್ಲಿವೆ. ಎಲ್ಲವೂ ಕೋಡಿ ಹರಿದಿವೆ. ಎಲ್ಲಾ ಕಟ್ಟಡಗಳು ಕೆಳ ಮಟ್ಟದಲ್ಲಿವೆ ಹಾಗೂ ಒತ್ತುವರಿ ಕೂಡ ಆಗಿದೆ.

ಇದನ್ನು ನಾವು ಗಂಭೀರವಾಗಿ ಪರಿಗಣಿಸಿದ್ದೇವೆ. ನಮ್ಮ ಅಧಿಕಾರಿಗಳು, ಇಂಜಿನಿಯರ್ ಗಳು, ಎಸ್.ಡಿ.ಆರ್.ಎಫ್ ತಂಡಗಳು 24/ 7 ಕೆಲಸ ಮಾಡುತ್ತಿವೆ. ಸಾಕಷ್ಟು ಒತ್ತುವರಿಯನ್ನು ನಾವು ತೆರವುಗೊಳಿಸಿದ್ದೇವೆ. ತೆರವುಗೊಳಿಸುವ ಕಾರ್ಯವನ್ನು ಮುಂದುವರೆಸಲಾಗುವುದು. ಕೆರೆಗಳ ನಿರ್ವಹಣೆಗೆ ಸ್ಲೂಯಿಸ್ ಗೇಟ್ ಗಳನ್ನು ಅಳವಡಿಸಲಾಗುತ್ತಿದೆ. ಎಲ್ಲಾ ಅಧಿಕಾರಿಗಳು ಸ್ಥಳದಲ್ಲಿಯೇ ಮೊಕ್ಕಾಂ ಹೂಡುವಂತೆ ಸೂಚಿಸಿದ್ದು, ಕರೆ ಬಂದ ಕೂಡಲೇ ಸಮಸ್ಯೆಯನ್ನು ಬಗೆಹರಿಸಲು ತಿಳಿಸಲಾಗಿದೆ. ನೀರು ತೆಗೆಯುವ ಕೆಲಸ ಜಾರಿಯಲ್ಲಿದೆ. ಒಂದೆರಡು ಸ್ಥಳಗಳಲ್ಲಿ ಸಮಸ್ಯೆ ಬಿಟ್ಟರೆ ಉಳಿದೆಡೆ ನೀರು ಹೊರ ತೆಗೆಯಲಾಗಿದೆ. ಮಳೆ ನಿರಂತರವಾಗಿ ಸುರಿ ಯುತ್ತಿರುವುದರಿಂದ ಕೆಲಸ ವಿಳಂಬವಾಗುತ್ತಿದೆ ಎಂದರು.

# ಬ್ರಿಟನ್ ಪ್ರಧಾನಿಯಾಗಿ ಲಿಜ್ ಟ್ರಸ್ ಅಧಿಕಾರಕ್ಕೆ



ಲಂಡನ್, ಸೆ. 6 – ಬ್ರಿಟನ್‌ನ ನೂತನ ಪ್ರಧಾನ ಮಂತ್ರಿಯಾಗಿ ಕನ್ಸರ್ವೇಟಿವ್ ಪಕ್ಷದ ನಾಯಕಿ ಲಿಜ್ ಟ್ರಸ್ ಅವರನ್ನು ನೇಮಿಸಿ ರಾಣಿ ಎರಡನೇ ಎಲಿಜಬೆತ್ ಆದೇಶ ಹೊರಡಿಸಿದ್ದಾರೆ. ಟ್ರಸ್ ಅವರು ಬ್ರಿಟನ್‌ನ ಮೂರನೇ ಮಹಿಳಾ ಪ್ರಧಾನಿಯಾಗಿದ್ದಾರೆ.

ಟ್ರಸ್ ಅವರು ಸ್ಕಾಟ್‌ಲ್ಯಾಂಡ್‌ನ ಬಾಲ್ಮೊರಲ್ ಕ್ಯಾಸ್ಟಲ್‌ನಲ್ಲಿರುವ ರಾಣಿ ಬಳಿ ತೆರಳಿ, ನೂತನ ಸರ್ಕಾರ ರಚಿಸಲು ಔಪಚಾರಿಕ ಅನುಮತಿ ಕೋರಿದ್ದಾರೆ.

ಇದಕ್ಕೂ ಮುಂಚೆ ಬೋರಿಸ್ ಜಾನ್ಸನ್ ಅವರು ಪ್ರಧಾನ ಮಂತ್ರಿ ಹುದ್ದೆಗೆ ರಾಜೀನಾಮೆ ನೀಡಿದ್ದರು. ಎಲಿಜಬೆತ್ ಅವಧಿಯಲ್ಲಿ ಟ್ರಸ್ ಅವರು 15ನೇ ಪ್ರಧಾನ ಮಂತ್ರಿಯಾಗಿದ್ದಾರೆ. 1952ರಲ್ಲಿ ವಿನ್‌ಸ್ಟನ್ ಚರ್ಚಿಲ್ ಅವರು ಎಲಿಜಬೆತ್ ಅವಧಿಯ ಮೊದಲ ಪ್ರಧಾನಿಯಾಗಿದ್ದರು.

ಸಾಮಾನ್ಯವಾಗಿ ಲಂಡನ್‌ನ ಬಕಿಂಗ್‌ಹ್ಯಾಮ್ ಅರಮನೆಯಲ್ಲಿ ಬಹುಮತ ಹೊಂದಿದ ಪಕ್ಷದ ನಾಯಕರು ರಾಣಿ ಹೆಸರಿನಲ್ಲಿ ಸರ್ಕಾರ ರಚಿಸುತ್ತಾರೆ. ಆದರೆ, ಪ್ರಯಾಣ ಕಡಿಮೆ ಮಾಡಲು ನಿರ್ಧರಿಸಿದ್ದ ರಾಣಿ ಎಲಿಜಬೆತ್, ಸ್ಕಾಟ್‌ಲ್ಯಾಂಡ್‌ನಿಂದಲೇ ಸರ್ಕಾರ ರಚನೆಯ ಪ್ರಕ್ರಿಯೆಗೆ ಚಾಲನೆ ನೀಡಿದ್ದಾರೆ.

# ಬರಪೀಡಿತ ಪ್ರದೇಶಗಳಲ್ಲೂ ಏರಿದ ಅಂತರ್ಜಲ

**ಎಲ್ಲ ಕೆರೆಗಳು ತುಂಬಿ ಪ್ರವಾಹ ಪರಿಸ್ಥಿತಿ : ಸಿಎಂ ಬೊಮ್ಮಾಯಿ**

**ಮುಂದಿನ ನಾಲ್ಕು ದಿನಗಳಲ್ಲಿ ಮತ್ತೆ ಮಳೆ ಹೆಚ್ಚಾಗುವ ಸೂಚನೆ**

ಬೆಂಗಳೂರು, ಸೆ. 6 - ರಾಜ್ಯದಲ್ಲಿ ಸತತ ಮಳೆಯಿಂದ ಅತ್ಯಂತ ಬರಪೀಡಿತ ಪ್ರದೇಶಗಳ ಅಂತರ್ಜಲ ಮಟ್ಟ ಮೇಲೇರಿದೆ ಹಾಗೂ ಎಲ್ಲಾ ಸಣ್ಣ ನೀರಾವರಿ ಹಾಗೂ ಅಚ್ಚುಕಟ್ಟು ಪ್ರದೇಶದ ಕೆರೆಗಳು ತುಂಬಿರುವುದರಿಂದ ರಾಜ್ಯದಲ್ಲಿ ಪ್ರವಾಹ ಸ್ಥಿತಿ ನಿರ್ಮಾಣವಾಗಿದೆ ಎಂದು ಸಿಎಂ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಮಳೆಯಾಗಿದೆ. ಇದರ ಜೊತೆಗೆ ನದಿ ಪಾತ್ರಗಳಿಂದ ಕೆರೆ ಕಟ್ಟೆಗಳಿಗೆ ನೀರು ತುಂಬಿಸುವ ಕೆಲಸ ನಿರಂತರವಾಗಿ ನಡೆದಿರುವುದರಿಂದ ಹೆಚ್ಚುವರಿ ನೀರು ಹರಿದು ಇಂತಹ ಸ್ಥಿತಿ ನಿರ್ಮಾಣವಾಗಿದೆ ಎಂದಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚಿಕ್ಕಬಳ್ಳಾಪುರ, ಕೋಲಾರ, ಚಿತ್ರದುರ್ಗ, ಚಾಮರಾಜನಗರ, ಗುಲ್ಬರ್ಗಾ, ಬೀದರ್, ಕೊಪ್ಪಳ ಎಲ್ಲಾ ಪ್ರದೇಶಗಳಲ್ಲಿ ಕೆರೆಗಳು ತುಂಬಿರುವುದು ದಾಖಲೆ. ರಾಜ್ಯದಲ್ಲಿ ಆಗಸ್ಟ್ ಕೊನೆ ವಾರದಲ್ಲಿ ಒಟ್ಟಾರೆ ಶೇ. 144 ರಷ್ಟು ಹೆಚ್ಚುವರಿ ಮಳೆಯಾಗಿದೆ.

ಸೆಪ್ಟೆಂಬರ್ 5 ದಿನಗಳಲ್ಲಿಯೇ ಶೇ 51ರಷ್ಟು ಮಳೆ ಹೆಚ್ಚಾಗಿದೆ. ಮುಂದಿನ ನಾಲ್ಕು ದಿನಗಳಲ್ಲಿ ಮತ್ತೆ ಮಳೆ ಹೆಚ್ಚಾಗುವ ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ. ಉತ್ತರ ಮತ್ತು ದಕ್ಷಿಣ ಒಳನಾಡಿನಲ್ಲಿ ಮಳೆಯಾಗುವ ಸೂಚನೆ ಇದೆ ಎಂದರು.

ಕೆರೆಗಳಿಗೆ ಸ್ಲೂಯೀಸ್ ಗೇಟ್‌ಗಳಿಲ್ಲ. ನೀರು ಹೊರಬಿಡಲು, ಹಿಡಿದಿಟ್ಟುಕೊಳ್ಳುವುದು ಹಾಗೂ ಕೆರೆ ನಿರ್ವಹಣೆಗೆ ಸ್ಲೂಯೀಸ್ ಗೇಟ್ ಅವಶ್ಯಕ. ದೊಡ್ಡ ಕೆರೆಗಳಿಗೆ ಸ್ಲೂಯೀಸ್ ಗೇಟ್ ಗಳನ್ನು ಅಳವಡಿಸಲು ತೀರ್ಮಾನ ಕೈಗೊಳ್ಳಲಾಗಿದೆ ಎಂದರು.

ಬೆಂಗಳೂರು ನಗರದಲ್ಲಿ ಸೆಪ್ಟೆಂಬರ್ 1 ರಿಂದ 5 ರವರೆಗೆ ಕೆಲವು ಪ್ರದೇಶಗಳಲ್ಲಿ ಶೇ. 150 ರಷ್ಟು ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ. ಮಹದೇವಪುರ, ಬೊಮ್ಮನಹಳ್ಳಿ, ಕೆ.ಆರ್. ಪುರಂ ಭಾಗದಲ್ಲಿ ಶೇ. 307 ರಷ್ಟು ಹೆಚ್ಚು ಮಳೆಯಾಗಿದೆ. ಕಳೆದ 42 ವರ್ಷಗಳಲ್ಲಿಯೇ ಆಗಿರುವ ಅತಿ ಹೆಚ್ಚಿನ ಮಳೆ ಇದು. ಬೆಂಗಳೂರಿನ 164 ಕೆರೆಗಳೆಲ್ಲವೂ ತುಂಬಿ ಹರಿಯುತ್ತಿವೆ. ಆದರೆ ಜೊತೆಗೆ ಮಳೆಯಾಗಿ ದೊಡ್ಡ ಪ್ರಮಾಣದ ಪ್ರವಾಹ ದಕ್ಷಿಣ ವಲಯದಲ್ಲಿ ಆಗಿದೆ. ಹಲವಾರು ಪ್ರದೇಶಗಳಿಗೆ ಭೇಟಿಯನ್ನೂ ನೀಡಲಾಗಿದೆ ಎಂದರು.

ಕೆಲವು ಪ್ರದೇಶಗಳಲ್ಲಿ ಅತಿಕ್ರಮಣ ಮಾಡಿ ಕಾಂಪೌಂಡ್, ಕಟ್ಟಡಗಳನ್ನು ಕಟ್ಟಿಕೊಂಡಿದ್ದಾರೆ. ರಸ್ತೆಯ ಮೇಲೆ ನೀರು ನಿಲ್ಲುವ ಪರಿಸ್ಥಿತಿ ಬಂದಿದೆ. ಅವುಗಳನ್ನು ತೆರವು ಮಾಡಲು ಆದೇಶ ನೀಡಿದ್ದೇನೆ. ಇನ್ನೂ ನಾಲ್ಕು ದಿನ ಮಳೆಯಿರುವುದರಿಂದ ಕಾರ್ಯಾಚರಣೆ ತೀವ್ರವಾಗಿ ಆಗಬೇಕು ಎಂದು ಸೂಚಿಸಲಾಗಿದೆ ಎಂದವರು ಹೇಳಿದರು.

ರಾಜ್ಯದ 17 ಜಿಲ್ಲೆಗಳ ಮಾಹಿತಿ ಪಡೆದಿದ್ದು, ಕಳೆದ 5 ದಿನಗಳಲ್ಲಿ 5092 ಜನ ಕಾಳಜಿ ಕೇಂದ್ರಗಳಲ್ಲಿ ಇದ್ದಾರೆ. 14717 ಹೆಕ್ಟೇರ್ ಪ್ರದೇಶ ಕೃಷಿ ಬೆಳೆ ಹಾಗೂ 1374 ಹೆಕ್ಟೇರ್ ಪ್ರದೇಶದ ತೋಟಗಾರಿಕಾ ಬೆಳೆ ಹಾನಿಯಾಗಿದೆ. ದಿನಗಳ ಮಳೆಗೆ 430 ಮನೆಗಳು ತೀವ್ರವಾಗಿ ಹಾನಿಯಾಗಿವೆ ಹಾಗೂ 2188 ಮನೆಗಳು ಭಾಗಶಃ ಹಾನಿಯಾಗಿವೆ. 255 ಕಿಮೀ ರಸ್ತೆಗಳು, ಸೇತುವೆಗಳು ಹಾಗೂ ಕಲ್ವರ್ಟ್, ವಿದ್ಯುತ್ ಕಂಬಗಳಿಗೆ ಹಾನಿಯಾಗಿದೆ ಎಂದರು.

ಮನೆಗಳ ಹಾನಿಯಾಗಿರುವುದನ್ನು ಕೂಡಲೇ ಸಮೀಕ್ಷೆ ಮಾಡಿ, ಮನೆಗಳಿಗೆ ನೀರು ನುಗ್ಗಿದ್ದರೆ 10 ಸಾವಿರ ರೂ. ತೀವ್ರವಾಗಿ ಹಾನಿಯಾಗಿದೆ. ಕೂಡಲೇ 95 ಸಾವಿರ ರೂ. ಹಾಗೂ ಕಡಿಮೆ ಹಾನಿಯಾಗಿದ್ದಾರೆ 50 ಸಾವಿರ ರೂ.ಗಳನ್ನು ನೀಡಲು ಕೂಡಲೇ ಕ್ರಮ ತೆಗೆದುಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದೆ. ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಯಲ್ಲಿ 664 ಕೋಟಿ ರೂ.ಗಳು ಲಭ್ಯವಿದೆ ಎಂದರು.

ಬೆಳೆ ಹಾನಿಗೆ ಜಂಟಿ ಸಮೀಕ್ಷೆ ಕೃಷಿ ಬೆಳೆ ಹಾನಿಯಾಗಿರುವುದಕ್ಕೆ ಮಳೆ ನಿಂತ ಕೂಡಲೇ ಜಂಟಿ ಸಮೀಕ್ಷೆ ಕೂಡಲೇ ಪ್ರಾರಂಭಿಸಲು ಪರಿಹಾರ ಆಪ್‌ನಲ್ಲಿ ಅಪ್ ಲೋಡ್ ಮಾಡುವಂತೆ ತಿಳಿಸಿದೆ. ಈಗಾಗಲೆ ಘೋಷಿಸಿದಂತೆ ಪೂರ್ತಿ ಬಿದ್ದುಹೋದ ಮನೆಗಳಿಗೆ 5 ಲಕ್ಷ, ತೀವ್ರವಾಗಿ ಹಾನಿಯಾದರೆ 3 ಲಕ್ಷ ಹಾಗೂ ಅಲ್ಪ ಹಾನಿಯಾಗಿದ್ದರೆ 50 ಸಾವಿರ ರೂ. ನೀಡಲು ಸೂಚಿಸಿದೆ.

ಎನ್.ಡಿ.ಆರ್.ಎಫ್ ನಿಯಮಗಳಿಗಿಂತ ಹೆಚ್ಚಿನ ಮೊತ್ತವಿದೆ. ಕೃಷಿ ಬೆಳೆ ಪರಿಹಾರವನ್ನು ಕೂಡ ಎನ್.ಡಿ.ಆರ್.ಎಫ್ ನಿಯಮಗಳಿಗಿಂತ ಹೆಚ್ಚಿದೆ. ಒಣ ಬೇಸಾಯಕ್ಕೆ 13600 ಸಾವಿರ, ನೀರಾವರಿ ಜಮೀನುಗಳಿಗೆ 25 ಸಾವಿರ ರೂ., ಹಾಗೂ ತೋಟಗಾರಿಕೆ ಗೆ 28 ಸಾವಿರ ರೂ.ಗಳು ನೀಡಲು ಸೂಚಿಸಿದೆ. ಅದರ ಪ್ರಕಾರ ಪರಿಹಾರ ಒದಗಿಸಲಾಗುವುದು ಎಂದರು.

ಅಂಗಡಿಗಳಿಗೆ, ವಾಣಿಜ್ಯ ಕೇಂದ್ರಗಳಿಗೆ ಹಾನಿಯಾಗಿದ್ದರೆ ಎನ್.ಡಿ.ಆರ್.ಎಫ್ ನಡಿ ಪರಿಹಾರ ನೀಡಲು ಅವಕಾಶ ಇಲ್ಲ. ಆದರೆ ಕಾರವಾರ, ರಾಮನಗರಕ್ಕೆ ಹೋದಾಗ ಅಂಗಡಿಗಳಿಗೆ ಪರಿಹಾರ ನೀಡಬೇಕೆನ್ನುವ ತೀರ್ಮಾನ ಮಾಡಿದ್ದು, ರಾಜ್ಯ ಸರ್ಕಾರ ವೇ ಹಣ ಭರಿಸಲಿದೆ. ಹಾನಿಯ ಆಧಾರದ ಮೇಲೆ ಪರಿಹಾರ ನೀಡಲಾಗುವುದು. ಪ್ರಥಮ ಬಾರಿಗೆ ಪ್ರವಾಹಕ್ಕೆ ರಾಜ್ಯದ ವಾಣಿಜ್ಯ ಕೇಂದ್ರಗಳಿಗೆ ಪರಿಹಾರ ನೀಡಲಾಗುತ್ತಿದೆ ಎಂದರು

ಬೆಂಗಳೂರಿನಲ್ಲಿನ ಮಳೆ ಪರಿಸ್ಥಿತಿ ಹಾಗೂ ಮೂಲಸೌಲಭ್ಯ ನಿರ್ವಹಣೆಗೆ 300 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲು ತೀರ್ಮಾನಿಸಲಾಗಿದೆ ಬೆಂಗಳೂರು ಮತ್ತು ರಾಜ್ಯದ ಪ್ರವಾಹ ನಿರ್ವಹಣೆಗೆ, ವಿಶೇಷವಾಗಿ ರಸ್ತೆ, ಸೇತುವೆ, ವಿದ್ಯುತ್ ಕಂಬ, ಟ್ರಾನ್ಸ್‌ಫಾರ್ಮರ್, ಶಾಲಾ ಕೊಠಡಿ ದುರಸ್ತಿ ಸೇರಿದಂತೆ ಮೂಲಸೌಲಭ್ಯದ ನಿರ್ವಹಣೆಗೆ ರಾಜ್ಯ ಸರ್ಕಾರ 600 ಕೋಟಿ ರೂ.ಗಳ ಬಿಡುಗಡೆ ಮಾಡಲು ತೀರ್ಮಾನಿಸಲಾಗಿದೆ.

# ವಾಣಿ ವಿಲಾಸ ಸಾಗರ ಭರ್ತಿ; ಸಾಣೇಹಳ್ಳಿ ಶ್ರೀ ವನಭೋಜನ

ಸಾಣೇಹಳ್ಳಿ, ಸೆ. 6- ಮಧ್ಯ ಕರ್ನಾಟಕದ ಬಯಲು ಸೀಮೆಯ ಅಮೃತವಾಹಿನಿ ಎಂದೇ ಹೆಸರಾಗಿರುವ ವಿವಿ ಸಾಗರ ಇಂದು ದಾಖಲೆಯ 132.10 ಅಡಿಗೆ ತಲುಪಿದ್ದು, ಕೋಡಿ ತುಂಬಿ ಅದರ ಮೇಲೆ ಮೂರು ಅಡಿ ಹರಿಯುತ್ತಿತ್ತು.

ಆ ನೀರಿನ ಸೆಳೆತದಲ್ಲೂ ಶ್ರೀಮಠದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳವರು ಧೈರ್ಯವಾಗಿ ಕೋಡಿ ದಾಟಿ, ಮೆಟ್ಟಿಲುಗಳನ್ನು ಹತ್ತಿ ಅಣೆಕಟ್ಟೆಯ ಮೇಲೆ ನಿಂತು ವಿಶಾಲ ಸಾಗರದಂತೆ, ಭಾರತದ ಭೂಪಟದಂತೆ ಕಾಣುವ ದೃಶ್ಯ ವೈಭವವನ್ನು ಕಣ್ತುಂಬಿಕೊಂಡರು.

ಸುತ್ತಮುತ್ತ ಎಲ್ಲೆಲ್ಲೂ ಹಸಿರೇ ಹಸಿರು, ನೀರೇ ನೀರು. ಮೇಲೆ ಸ್ವಚ್ಛ ತಿಳಿನೀಲ ಮುಗಿಲು! ಮಧ್ಯಾಹ್ನ ಶಿಷ್ಯಂದಿರು ತಂದಿದ್ದ ರೊಟ್ಟಿ-ಎಣಗಾಯಿ ಪಲ್ಯ, ಹಾಲು ಪಾಯಸ, ಬೇಯಿಸಿದ ಪರಂಗಿಹಣ್ಣು, ಹುರುಳಿಕಾಳು, ಮೊಸರನ್ನ, ಅಂಟಿನ ಉಂಡೆ, ಕಾಯಿರಸ, ತುಪ್ಪ, ಮೊಸರು, ಅನ್ನ-ಸಾಂಬಾರ್, ಮಜ್ಜಿಗೆಯ ಜೊತೆಗೆ ನಂಚಿಕೊಳ್ಳಲು ಉಪ್ಪಿನಕಾಯಿ, ಸೌತೇಕಾಯಿ ಮುಂತಾದ ಭಕ್ಷ್ಯಭೋಜ್ಯಗಳನ್ನು ಶಿಷ್ಯಂದಿರೊಂದಿಗೆ ಸಾಮೂಹಿಕವಾಗಿ ಸವಿದರು.



ನಂತರ ಮಾತನಾಡಿ ವಿವಿ ಸಾಗರ ತುಂಬಿರುವುದು ಜಿಲ್ಲೆಯ ಜನರಿಗಷ್ಟೇ ಅಲ್ಲ; ರಾಜ್ಯದ ಜನರಿಗೆ ಸಂತಸ ತಂದಿದೆ. ಈ ಸೌಂದರ್ಯವನ್ನು ಕಣ್ತುಂಬಿಕೊಳ್ಳಲು ಜನ ನಾನಾ ಕಡೆಯಿಂದ ತಂಡ-ತಂಡವಾಗಿ ಜಾತ್ರೆಗೆ ಬಂದಂತೆ ಬರುತ್ತಿದ್ದಾರೆ. ಭದ್ರಾ ಮೇಲ್ದಂಡೆಯ ನೀರು ಮುಂದೆಯೂ ಹರಿದು ಬರುವುದರಿಂದ ನೀರು ಖಾಲಿಯಾಗದು. ಹಾಗಾಗಿ ಇದೊಂದು ಪ್ರಸಿದ್ಧ ಪ್ರವಾಸಿ ಕ್ಷೇತ್ರವಾಗುವುದರಲ್ಲಿ ಅನುಮಾನವಿಲ್ಲ.

ಪ್ರವಾಸಿಗರ ಸುರಕ್ಷತೆಯ ಜೊತೆಗೆ ಮನೋರಂಜನೆ ಮತ್ತು ಮೂಲಭೂತ ಅನುಕೂಲಗಳನ್ನು ಕಲ್ಪಿಸಬೇಕು. ಮತ್ತೋಡು-ಮಾರಿಕಣಿವೆಯ ಸಂಪರ್ಕ ರಸ್ತೆಯನ್ನು ಇನ್ನಷ್ಟು ಎತ್ತರಿಸಬೇಕು.

ಜೊತೆಗೆ ಬಹುಮುಖ್ಯವಾಗಿ ಹಿನ್ನೀರಿನಿಂದ ಕೆಲವು ಗ್ರಾಮಗಳೂ ಸೇರಿದಂತೆ ಹೊಲ, ಗದ್ದೆ, ತೋಟಗಳು ಮುಳುಗಡೆಯಾ ಗಿವೆ. ಈ ಅನಾಹುತಗಳಿಗೆ ಶಾಶ್ವತವಾದ ಸೂಕ್ತ ಪರಿಹಾರಗಳನ್ನು ಕಂಡುಕೊಳ್ಳಬೇಕು. ಬಹಳ ದಿನಗಳ ನಂತರ ವನವಿಹಾರ, ವನಭೋಜನಗಳು ಸಂತಸವನ್ನುಂಟು ಮಾಡಿದೆ ಎಂದರು.

ಜೊತೆಯಲ್ಲಿ ಹೆಬ್ಬಳ್ಳಿಯ ಎಚ್. ವಿ. ಓಂಕಾರಪ್ಪ, ಹೆಚ್.ಸಿ. ಮಲ್ಲಿಕಾರ್ಜುನ, ರೇವಣಸಿದ್ದಯ್ಯ, ಜಾನ್ಕಲ್ ಶಂಕರಮೂರ್ತಿ, ತಿಮ್ಮಜ್ಜ, ದೇವಿಗೆರೆ ನಂಜಂಡೇಶ್ವರ, ಮಧುರೆ ಪ್ರವೀಣ್, ಐ.ಜಿ. ಚಂದ್ರಶೇಖರಯ್ಯ ಮತ್ತಿತರರಿದ್ದರು.

# ರೈತನ ಆತ್ಮಹತ್ಯೆಗೆ ಜಿಲ್ಲಾಡಳಿತವೇ ಹೊಣೆ

## ರೈತ ಮುಖಂಡ ರವೀಂದ್ರಗೌಡ ಪಾಟೀಲ ಆರೋಪ



ರಾಣೇಬೆನ್ನೂರು,ಸೆ.6- ಅತಿ ವೃಷ್ಟಿಯಿಂದಾದ ಬೆಳೆ ನಷ್ಟ ಪರಿಹಾರ ಘೋಷಿಸದೇ ಇರುವುದು ಮತ್ತು ಮೂರು ವರ್ಷಗಳಿಂದ ಬೆಳೆ ವಿಮೆ ಯೋಜನೆಯಲ್ಲಿ ಆಗಿರುವ ಅಕ್ರಮಗಳ ಬಗ್ಗೆ ಸರ್ಕಾರ ಮತ್ತು ಜಿಲ್ಲಾಡಳಿತ ರೈತ ವಿರೋಧಿ ಧೋರಣೆ ಅನುಸರಿಸುತ್ತಿರುವುದರಿಂದ ಮನನೊಂದು ರಾಣೇಬೆನ್ನೂರು ತಾಲ್ಲೂಕು ಗುಡ್ಡದ ಹೊಸಳ್ಳಿಯ ರೈತ ಮಾದೇವಪ್ಪ ಹಾಲಪ್ಪ ಬಿಲ್ಲಹಳ್ಳಿ (46) ನೇಣಿಗೆ ಶರಣಾಗಿರುವುದು ದುರ್ದೈವದ ಸಂಗತಿ. ಈ ರೈತನ ಸಾವಿನ ಹೊಣೆಯನ್ನು ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾಡಳಿತ ಹೊರಬೇಕೆಂದು ರೈತ ಮುಖಂಡ ರವೀಂದ್ರ ಗೌಡ ಎಫ್. ಪಾಟೀಲ ಗಂಭೀರ ಆರೋಪ ಮಾಡಿದ್ದಾರೆ.

ಆರ್ಥಿಕ ಸಂಕಷ್ಟಕ್ಕೆ ಸಿಲುಕಿ ರೈತ ಮಾದೇವಪ್ಪ ಆತ್ಮಹತ್ಯೆಗೆ ಶರಣಾಗಿದ್ದು, ಆತನ ಮೃತದೇಹದ ಪೋಸ್ಟ್‌ಮಾರ್ಟಂ ಮುಗಿದ ಮೇಲೆ ಇಲ್ಲಿಯ ಸಾರ್ವಜನಿಕ ಆಸ್ಪತ್ರೆಯ ಮುಂದೆ ಶವವಿಟ್ಟು ಪ್ರತಿಭಟಿಸಿದ ಸಂದರ್ಭದಲ್ಲಿ ಮಾತನಾಡಿದ ಅವರು, ಸರ್ಕಾರಕ್ಕೆ ಇನ್ನೆಷ್ಟು ರೈತರ ಬಲಿಬೇಕಾಗಿದೆ ? ಎಂದು ಪ್ರಶ್ನಿಸಿದರು.

ಅತಿವೃಷ್ಟಿ, ಬೆಳೆ ವಿಮೆಯಲ್ಲಾದ ಗೋಲ್ಮಾಲ್, ಬೆಳೆನಷ್ಟ ಪರಿಹಾರ ಸಿಗದೇ ರೈತರು ಮತ್ತೆ ಬದುಕು ಕಟ್ಟಿಕೊಳ್ಳಲಾಗದ ಸ್ಥಿತಿಗೆ ತಲುಪಿ, ಆರ್ಥಿಕ ತೊಂದರೆಯಿಂದ ಸರಣಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರೂ ಕೂಡಾ

**ರಾಣೇಬೆನ್ನೂರು**

ಸರ್ಕಾರ ಮತ್ತು ಜಿಲ್ಲಾಡಳಿತ ತಮಗೆ ಸಂಬಂಧವೇ ಇಲ್ಲ ಎನ್ನುವ ರೀತಿಯಲ್ಲಿ ನಿಷ್ಕ್ರಿಯಗೊಂಡಿದ್ದು ರೈತರ ಸರಣಿ ಆತ್ಮಹತ್ಯೆಗೆ ಕಾರಣವಾಗಿದೆ ಎಂದ ಪಾಟೀಲರು, ಶೀಘ್ರವೇ ಜಿಲ್ಲಾಡಳಿತ ರೈತರ ಈ ಜ್ವಲಂತ ಸಮಸ್ಯೆಗಳ ನಿವಾರಣೆಗೆ ಶಾಶ್ವತ ಪರಿಹಾರ ಕಂಡುಹಿಡಿಯಬೇಕು. ಇಲ್ಲದಿದ್ದರೆ ಮುಖ್ಯಮಂತ್ರಿ ಮತ್ತು ಕೃಷಿ ಮಂತ್ರಿಗಳ ತವರು ಜಿಲ್ಲೆಯ ಬಂದ್‌ಗೆ ಕರೆ ನೀಡಲಾಗುವುದೆಂದು ಎಚ್ಚರಿಸಿದರು.

ಕಂದಾಯ ಇಲಾಖೆಯ ಅಶೋಕ ಅರಳೇಶ್ವರ, ಮಂಜುನಾಥ ಜಲ್ಲೇರ, ಕೃಷಿ ಇಲಾಖೆಯ ಶಿವಾನಂದ ಎನ್., ರೈತ ಮುಖಂಡರಾದ ಆರ್.ಡಿ. ಪಾಟೀಲ, ಗಿರೀಶ ಹುಡೇದ, ಶಿವಾನಂದ ಲಿಂಗದಹಳ್ಳಿ, ಚಂದ್ರು ನಾಯಕ, ನಿಂಗಣ್ಣ ಕೊಟ್ಟದ, ರಾಮನಗೌಡ ಬಂಗಾರಿ, ಬಸವರಾಜಪ್ಪ ಹಿಂಡೇರ, ಶಿವನಗೌಡ ಹಿಂಡೇರ ಮುಂತಾದವರು ಹಾಜರಿದ್ದರು.

## ಜಿಲ್ಲೆಯಲ್ಲಿ ಮದ್ಯ ಮಾರಾಟ ನಿಷೇಧ

ದಾವಣಗೆರೆ, ಸೆ.6- ಗಣೇಶ ವಿಸರ್ಜನೆ ಮೆರವಣಿಗೆ ಸಂದರ್ಭದಲ್ಲಿ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಮದ್ಯ ಮಾರಾಟ ಮತ್ತು ಸರಬರಾಜನ್ನು ನಾಡಿದ್ದು ದಿನಾಂಕ 8 ರ ಗುರುವಾರ ಬೆಳಿಗ್ಗೆ 6 ರಿಂದ ಮಧ್ಯರಾತ್ರಿ 12 ಗಂಟೆವರೆಗೆ ನಿಷೇಧಗೊಳಿಸಲು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಆದೇಶಿಸಿದ್ದಾರೆ.

# ಪಂಪ್‌ಸೆಟ್‌ಗಳಿಗೆ ಮೀಟರ್ ಇಲ್ಲ

(1ನೇ ಪುಟದಿಂದ) ಕಂಪನಿಗಳಿಗೆ 3400 ಕೋಟಿ ರೂಪಾಯಿ, ಕರ್ನಾಟಕ ಪವರ್ ಕಾರ್ಪೊರೇಷನ್‌ಗೆ 5000 ಕೋಟಿ ರೂಗಳಿಗಿಂತ ಹೆಚ್ಚು ಹಣವನ್ನು ಸರ್ಕಾರ ಬಾಕಿ ಉಳಿಸಿಕೊಂಡಿತ್ತು. ಸರ್ಕಾರ ಸಬ್ಸಿಡಿ ಹಣವನ್ನು ಪ್ರಸರಣ ನಿಗಮಗಳಿಗೆ ನೀಡದೇ ಅವುಗಳನ್ನು ಮುಚ್ಚಿಸಿ, ಖಾಸಗಿಕರಣಗೊಳಿಸಲು ಮುಂದಾಗಿದ್ದರು ಎಂದು ಅಂಕಿ - ಅಂಶಗಳನ್ನು ಬಹಿರಂಗಪಡಿಸಿದರು.

> **ಪರಿಶಿಷ್ಟರಿಗೆ ಉಚಿತ ವಿದ್ಯುತ್ ಮುಂದುವರಿಕೆ ಸಿದ್ದರಾಮಯ್ಯ ಕಾಲದಲ್ಲೇ ವಿದ್ಯುತ್ ನಿಗಮಗಳ ಖಾಸಗೀಕರಣದ ಹುನ್ನಾರ ನಡೆದಿತ್ತು : ಸಚಿವ ಸುನೀಲ್ ಕುಮಾರ್**

ರೈತರ ಕೃಷಿ ಪಂಪ್ ಸೆಟ್ ಗಳ ಬಾಬ್ತಿನಲ್ಲಿ ವಿದ್ಯುತ್ ಕಂಪನಿಗಳಿಗೆ 3400 ಕೋಟಿ ರೂಪಾಯಿ ಬಾಕಿ ಉಳಿಸಿಕೊಂಡಿದ್ದು ಮತ್ತು ಪವರ್ ಕಾರ್ಪೊರೇಷನ್‌ಗೆ 5000 ಕೋಟಿ ರೂಗಳಿಗೂ ಅಧಿಕ ಹಣವನ್ನು ಬಾಕಿ ಉಳಿಸಿಕೊಂಡರೆ ಸಹಜವಾಗಿಯೇ ಅವು ಬಾಗಿಲು ಮುಚ್ಚಿಕೊಳ್ಳುವ ಸ್ಥಿತಿ ಬರುತ್ತದೆ ಎಂದು ಸಿದ್ದರಾಮಯ್ಯ ಲೆಕ್ಕ ಹಾಕಿದ್ದರು.

ನಾವು ಅಧಿಕಾರಕ್ಕೆ ಬಂದ ನಂತರ ಸರ್ಕಾರ 8000 ಕೋಟಿ ರೂ. ಸಹಾಯಧನವನ್ನು ನಿಗಮಗಳಿಗೆ ನೀಡಿ, ಅವುಗಳು ಚೇತರಿಸಿಕೊಳ್ಳುವಂತೆ ಮಾಡಿವೆ.

ನಮ್ಮಲ್ಲಿ ವಿದ್ಯುತ್ ಬೇಡಿಕೆಗಿಂತ ಉತ್ಪಾದನೆ ಶೇಕಡ 50 ರಷ್ಟು ಹೆಚ್ಚಿದೆ. ಇದೇ ಮೊದಲಿಗೆ ಅನ್ಯ ರಾಜ್ಯಗಳಿಗೆ ವಿದ್ಯುತ್ ಮಾರಾಟ ಮಾಡುತ್ತಿದ್ದೇವೆ.

ನಮ್ಮಲ್ಲಿ ಉತ್ಪಾದನೆ ಯಥೇಚ್ಛವಾಗಿದೆ. ಅದನ್ನು ಸದ್ಬಳಕೆ ಮಾಡಿಕೊಳ್ಳದೇ ಸಿದ್ದರಾಮಯ್ಯ ಸರ್ಕಾರ ಪೂರ್ಣವಾಗಿ ಇಲಾಖೆಯನ್ನೇ ಖಾಸಗಿಯವರ ಮಡಿಲಿಗೆ ಹಾಕಲು ಹೊರಟಿದ್ದರು. ಆದರೆ, ತಮ್ಮ ಈ ಸಂಚಿನ ಸುಳಿವು ನೀಡದೆ ಮುಂದೆ ಅಧಿಕಾರಕ್ಕೆ ಬಂದ ಬಿಜೆಪಿಯನ್ನು ರೈತ ವಿರೋಧಿ ಎಂದು ಪ್ರತಿಬಿಂಬಿಸುವ ಕೆಲಸ ಶುರು ಮಾಡಿದರು. ಈಗ ರೈತರ ಕೃಷಿ ಪಂಪ್ ಸೆಟ್ ಗಳಿಗೆ ನಾವು ಮೀಟರ್ ಅಳವಡಿಕೆ ಮಾಡಲು ಹೊರಟಿದ್ದೇವೆ ಎಂದು ಅಪ ಪ್ರಚಾರ ಮಾಡುತ್ತಿದ್ದಾರೆ. ಆದರೆ, ಯಾವ ಕಾರಣಕ್ಕೂ ನಾವು ಅನ್ನದಾತನ ಬದುಕಿಗೆ ಕೊಳ್ಳಿ ಇಡುವ ಕೆಲಸ ಮಾಡುವುದಿಲ್ಲ. ಅನ್ನದಾತನ ಹಿತಕ್ಕೆ ಧಕ್ಕೆ ತರುವ ಯಾವ ನಿಯಮಾವಳಿಗಳನ್ನೂ ಮಾಡುವುದಿಲ್ಲ ಎಂದರು.

ಸಿದ್ಧರಾಮಯ್ಯ ಅವರ ಅಧಿಕಾರಾವಧಿಯ ಕಾಲದಲ್ಲಿ ಗ್ರಾಮೀಣಾಭಿವೃದ್ದಿ ಮತ್ತು ಪಂಚಾಯತ್ ರಾಜ್ ಇಲಾಖೆ ವಿದ್ಯುತ್ ಕಂಪನಿಗಳಿಗೆ ಆರು ಸಾವಿರ ಕೋಟಿ ರೂ.ಗಳಿಗಿಂತ ಹೆಚ್ಚು ಹಣವನ್ನು ಬಾಕಿ ಕೊಡಬೇಕಿತ್ತು. ಆದರೆ, ಸಿದ್ದರಾಮಯ್ಯ ಅವರು ಈ ಬಾಕಿಗೆ ಸಂಬಂಧಿಸಿದ ಹಣ ನೀಡದೆ ಇಂಧನ ಇಲಾಖೆಯಿಂದಲೇ ಸಾಲ ಎತ್ತಿ ಗ್ರಾಮೀಣಾಭಿವೃದ್ದಿ ಮತ್ತು ಪಂಚಾಯತ್ ರಾಜ್ ಇಲಾಖೆ ಬಾಬ್ತಿನಲ್ಲಿ ಹಣ ನೀಡಿದರು. ಈಗ ಆ ಹಣವನ್ನು ನಾವೇ ತೀರಿಸುತ್ತಿದ್ದೇವೆ ಎಂದು ಆರೋಪಿಸಿದರು.

ಈ ಹಣ ಬಿಡುಗಡೆ ಮಾಡದೆ ವಿದ್ಯುತ್ ಕಂಪನಿಗಳು ಮತ್ತು ಪವರ್ ಕಾರ್ಪೊರೇಷನ್ ಕೆಲಸ ಮಾಡುವ ಸ್ಥಿತಿಯಲ್ಲೇ ಇರಲಿಲ್ಲ. ಹೀಗಾಗಿ ಬಸವರಾಜ ಬೊಮ್ಮಾಯಿ ಅವರು ಸಿದ್ಧರಾಮಯ್ಯ ಕಾಲದ ಬಾಕಿ ಹಣವನ್ನು ಬಿಡುಗಡೆ ಮಾಡಿ ಆ ಸಂಸ್ಥೆಗಳನ್ನು ಉಳಿಸಿದ್ದಾರೆ ಎಂದರು.

ರೈತರ ಕೃಷಿ ಪಂಪ್ ಸೆಟ್‌ಗಳಿಗೆ ವಾರ್ಷಿಕ ಹದಿನಾರು ಸಾವಿರ ಕೋಟಿ ರೂಪಾಯಿಗಳಷ್ಟು ಹಣವನ್ನು ಸಬ್ಸಿಡಿ ರೂಪದಲ್ಲಿ ಸರ್ಕಾರ ನೀಡುತ್ತಿದ್ದು, ಈ ಬಾಬ್ತಿನಲ್ಲಿ ಕಳೆದ ವರ್ಷಕ್ಕಿಂತ 1200 ಕೋಟಿ ರೂಪಾಯಿ ಹೆಚ್ಚುವರಿ ಹೊರೆ ಬಂದಿದೆ. ಈ ಹಣವನ್ನು ಬಿಡುಗಡೆ ಮಾಡುವಂತೆ ಹಣಕಾಸು ಇಲಾಖೆಗೆ ಪತ್ರ ಬರೆದಿದ್ದೇವೆ ಎಂದು ವಿವರಿಸಿದರು.

ಉತ್ಪಾದನೆಯಾಗುತ್ತಿರುವ ವಿದ್ಯುತ್ತಿನ ಪೈಕಿ ಶೇ. 40ರಷ್ಟು ವಿದ್ಯುತ್ ಕೃಷಿ ಕ್ಷೇತ್ರಕ್ಕೆ ಬಳಕೆಯಾಗುತ್ತಿದೆ. ಕೈಗಾರಿಕಾ ಕ್ಷೇತ್ರಕ್ಕೆ ಶೇ. 20ರಷ್ಟು ವಿದ್ಯುತ್ ಒದಗಿಸಲಾಗುತ್ತಿದೆ ಎಂದು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು. ಪರಿಶಿಷ್ಟ ಜಾತಿ, ವರ್ಗದ ಜನರಿಗೆ ಅಮೃತ ಜ್ಯೋತಿ ಯೋಜನೆಯಡಿ ತಲಾ ಎಪ್ಪತ್ತೈದು ಯೂನಿಟ್ ವಿದ್ಯುತ್ ಅನ್ನು ಉಚಿತವಾಗಿ ನೀಡುತ್ತಿದ್ದು, ಈ ವಿದ್ಯುತ್ ಪಡೆಯಲು ಅರ್ಜಿ ಹಾಕುವವರಿಗೆ ಇದ್ದ ಅಡೆತಡೆಗಳನ್ನು ನಿವಾರಿಸಲು ಹಿಂದಿದ್ದ ನಿಯಮಾವಳಿಗಳ ಸುತ್ತೋಲೆಯನ್ನು ಹಿಂಪಡೆಯಲಾಗಿದೆ. ಅರ್ಜಿ ಹಾಕುವವರು ಸುವಿಧಾ ಎಂಬ ಹೆಸರಿನ ಆಪ್ ಬಳಸುವಂತೆ ನಿಯಮಾವಳಿಯಲ್ಲಿ ಹೇಳಲಾಗಿತ್ತು. ಆದರೆ, ಗ್ರಾಮಾಂತರ ಪ್ರದೇಶದ ಜನರು ಇದನ್ನು ಬಳಸಿ ಅರ್ಜಿ ಹಾಕುವುದು ಕಷ್ಟ ಎಂಬ ಕಾರಣಕ್ಕಾಗಿ ನಿಯಮಾವಳಿಗಳನ್ನು ಸರಳಗೊಳಿಸಲು ಸರ್ಕಾರ ಮುಂದಾಗಿದೆ.

ಇದೇ ಕಾರಣಕ್ಕಾಗಿ ಅಮೃತ ಜ್ಯೋತಿ ಯೋಜನೆಯಡಿ ಅರ್ಜಿ ಸಲ್ಲಿಸಲು ಸರಳೀಕರಣಗೊಂಡ ನಿಯಮಾವಳಿಗಳನ್ನು ಜಾರಿಗೆ ತರಲಾಗುವುದು. ಆದರೆ ಇದನ್ನೇ ರಾಜಕೀಯ ಮಾಡಲು ಕಾಂಗ್ರೆಸ್ ಪಕ್ಷ ಹೊರಟಿದ್ದು ಅಮೃತ ಜ್ಯೋತಿ ಯೋಜನೆಯನ್ನೇ ರದ್ದು ಮಾಡಲು ಹೊರಟಿದ್ದೇವೆ ಎಂದು ಪ್ರತಿಬಿಂಬಿಸತೊಡಗಿದೆ. ಆದರೆ, ಯಾವ ಕಾರಣಕ್ಕೂ ಪರಿಶಿಷ್ಟ ಜಾತಿ, ವರ್ಗದವರಿಗೆ ಎಪ್ಪತ್ತೈದು ಯೂನಿಟ್ ಉಚಿತ ವಿದ್ಯುತ್ ನೀಡುವ ಅಮೃತಜ್ಯೋತಿ ಯೋಜನೆಯನ್ನು ರದ್ದುಪಡಿಸುವ ಪ್ರಶ್ನೆಯೇ ಇಲ್ಲ ಎಂದು ಅವರು ಇದೇ ಸಂದರ್ಭದಲ್ಲಿ ಸ್ಪಷ್ಟ ಪಡಿಸಿದರು.

ರಾಜ್ಯದಲ್ಲಿ ಅಮೃತಜ್ಯೋತಿ ಯೋಜನೆಯಡಿ 34 ಲಕ್ಷ ಮಂದಿ ಫಲಾನುಭವಿಗಳಿದ್ದು, ಹೊಸದಾಗಿ ನಾಲ್ಕು ಲಕ್ಷ ಮಂದಿ ಅರ್ಜಿ ಹಾಕಿದ್ದಾರೆ. ಈ ಪೈಕಿ ಹದಿನೈದು ಸಾವಿರ ಮಂದಿಗೆ ಉಚಿತ ವಿದ್ಯುತ್ ನೀಡಲು ತೀರ್ಮಾನಿಸಲಾಗಿದೆ ಎಂದರು. ರಾಜ್ಯದಲ್ಲಿ ಸುರಿಯುತ್ತಿರುವ ಮಳೆಯಿಂದ ವಿದ್ಯುತ್ ಬೇಡಿಕೆಯ ಪ್ರಮಾಣ ಕಡಿಮೆಯಾಗಿದ್ದು, ಏಳರಿಂದ ಎಂಟು ಸಾವಿರ ಮೆಗಾವ್ಯಾಟ್‌ಗಳಷ್ಟು ವಿದ್ಯುತ್‌ಗೆ ಬೇಡಿಕೆಯಿದೆ. ಆದರೆ, ಕಳೆದ ಮಾರ್ಚ್ ತಿಂಗಳಲ್ಲಿ ವಿದ್ಯುತ್ ಬೇಡಿಕೆಯ ಪ್ರಮಾಣ ಹದಿನಾಲ್ಕು ಸಾವಿರ ಮೆಗಾವ್ಯಾಟ್‌ಗಳಷ್ಟಿತ್ತು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

# ಕೈಗಾರಿಕಾ ಜಮೀನು ಹಂಚಿಕೆ ಪದ್ಧತಿ

(1ನೇ ಪುಟದಿಂದ) ಆಫ್ ಲ್ಯಾಂಡ್ ಅಲಾಟ್‌ಮೆಂಟ್' ಪದ್ದತಿಯನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಹೊಸ ಆದೇಶದ ಮೂಲಕ ಜಾರಿಗೊಳಿಸಿದೆ.

> **10 ಎಕರೆವರೆಗಿನ ಭೂಮಿ ಹಂಚಿಕೆಗೆ ಪರಿಶೀಲನೆ ಅಗತ್ಯವಿಲ್ಲ**

ಭೂ ಪರಿಶೋಧನಾ ಸಮಿತಿಯಲ್ಲಿ 10 ಎಕರೆವರೆಗಿನ ಭೂಮಿ ಹಂಚಿಕೆಗೆ ಪರಿಶೀಲನೆ ಅವಶ್ಯವಿಲ್ಲ ಎಂದು ಹೊಸ ಆದೇಶ ಸ್ಪಷ್ಟಪಡಿಸಿದೆ. ಹೂಡಿಕೆ ಪ್ರಸ್ತಾವನೆಗಳು ಈಗ ನೇರವಾಗಿ ರಾಜ್ಯಮಟ್ಟದ ಸಮಿತಿಯ ಮುಂದೆ ಮಂಡನೆಯಾಗಲಿವೆ.

ರಾಜ್ಯದಲ್ಲಿ ಬಂಡವಾಳ ಹೂಡಿಕೆ ಮಾಡಲು ಮುಂದೆ ಬರುವ ಉದ್ಯಮಗಳಿಗೆ ಅಗತ್ಯವಿರುವ ಭೂಮಿಯನ್ನು ಸುಲಭವಾಗಿ ನೀಡುವುದು ಇದರ ಮುಖ್ಯ ಉದ್ದೇಶ. ಸುಲಲಿತ ವ್ಯವಹಾರದಲ್ಲಿ ದೇಶದಲ್ಲೇ ಮುಂಚೂಣಿ ಸ್ಥಾನದಲ್ಲಿರುವ ರಾಜ್ಯಕ್ಕೆ ಹೆಚ್ಚು ಹೆಚ್ಚು ಉದ್ಯಮಗಳನ್ನು ಆಕರ್ಷಿಸಲು ಈ ನಿರ್ಧಾರವನ್ನು ತೆಗೆದುಕೊಂಡಿದೆ.

10 ಎಕರೆಗಿಂತ ಕಡಿಮೆ ವಿಸ್ತೀರ್ಣದ ಭೂಮಿಗಾಗಿ ಜಮೀನು ಪರಿಶೀಲನಾ ಸಮಿತಿಗೆ ಹೋಗುವ ಬದಲು ನೇರವಾಗಿ ಜಿಲ್ಲಾ ಅಥವಾ ರಾಜ್ಯ ಮಟ್ಟದ ಅನುಮೋದನಾ ಸಮಿತಿಯಲ್ಲಿ ಅನುಮೋದನೆ ನೀಡುವುದರಿಂದ ಪ್ರಸ್ತಾವನೆಗಳಿಗೆ ತ್ವರಿತವಾಗಿ ಅನುಮೋದನೆ ದೊರೆಯುತ್ತದೆ. ಇದರಿಂದ ಸಣ್ಣ, ಅತಿ ಸಣ್ಣ ಮತ್ತು ಮಧ್ಯಮ ಉದ್ಯಮದಾರರಿಗೆ ಅನುಕೂಲವಾಗುವುದು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವ ಡಾ. ಮುರುಗೇಶ್ ಆರ್. ನಿರಾಣಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

## ಬಿಜೆಪಿ : ಇಂದು ಭದ್ರೆಗೆ ಬಾಗಿನ

ಬಿಜೆಪಿ-ಭಾರತೀಯ ರೈತ ಒಕ್ಕೂಟದ ಆಶ್ರಯದಲ್ಲಿ ಇಂದು ಬೆಳಿಗ್ಗೆ 11ಕ್ಕೆ ಭದ್ರಾ ಜಲಾಶಯಕ್ಕೆ ಬಾಗಿನ ಅರ್ಪಿಸಲಾಗುತ್ತದೆ. ಜಿ.ಎಂ.ಸಿದ್ದೇಶ್ವರ, ಎಸ್.ಎ. ರವೀಂದ್ರನಾಥ್, ಹನಗವಾಡಿ ವೀರೇಶ್, ಶಾಮನೂರು ಹೆಚ್.ಆರ್.ಲಿಂಗರಾಜ್ ನೇತೃತ್ವ ವಹಿಸುವರು.


**ಶಿವ ಸಹಕಾರಿ ಬ್ಯಾಂಕ್ ನಿ.,**

**ಆಡಳಿತ ಕಚೇರಿ ಮತ್ತು ಪ್ರಧಾನ ಕಛೇರಿ : ಹಳೇ ಆಸ್ಪತ್ರೆ ರಸ್ತೆ, ದಾವಣಗೆರೆ-577 001.**

ಫ್ಯಾಕ್ಸ್ ನಂ.08192-237488, ದೂ. 256107, 255909. E-mail: shivabank@rediffmail.com

**ಮಾನ್ಯ ಷೇರುದಾರರ ಗಮನಕ್ಕೆ**

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮ ಹಾಗೂ ಬ್ಯಾಂಕಿನ ಬೈಲಾ ನಂ. 201 (1)ರನ್ವಯ ಷೇರುದಾರರು ಕನಿಷ್ಠ 2,000/- ಷೇರು ಹಣವನ್ನು ಹೊಂದುವುದು ಕಡ್ಡಾಯವಾಗಿರುತ್ತದೆ. (2) ಸದಸ್ಯರು ಐದು ವಾರ್ಷಿಕ ಸಭೆಗಳಲ್ಲಿ ಕನಿಷ್ಠ ಮೂರು ವಾರ್ಷಿಕ ಮಹಾಸಭೆಗೆ ಹಾಜರಾಗುವುದು ಕಡ್ಡಾಯವಾಗಿರುತ್ತದೆ. (3) ಮೂರು ನಿರಂತರ ವರ್ಷಗಳಲ್ಲಿ ಬ್ಯಾಂಕಿನ ಬೈಲಾದಲ್ಲಿ ನಿಗದಿಪಡಿಸಿದ ಕನಿಷ್ಠ ವ್ಯವಹಾರವನ್ನು ಬ್ಯಾಂಕಿನಲ್ಲಿ ಮಾಡಿರಬೇಕಾಗಿರುತ್ತದೆ. ಹಾಗೂ ಆರ್‌ಬಿಐ ನಿಯಮಾನುಸಾರ KYC ದಾಖಲೆಗಳನ್ನು ಬ್ಯಾಂಕಿಗೆ ಹಾಜರುಪಡಿಸುವುದು ಕಡ್ಡಾಯವಾಗಿರುತ್ತದೆ. ಈ ನಿಯಮಗಳನ್ನು ಪಾಲಿಸಲು ತಪ್ಪಿದ್ದಲ್ಲಿ ಬ್ಯಾಂಕಿನ ಮುಂಬರುವ ಚುನಾವಣೆಯಲ್ಲಿ ಭಾಗವಹಿಸುವ, ಸ್ಪರ್ಧಿಸುವ ಮತ್ತು ಮತ ನೀಡುವ ಹಕ್ಕನ್ನು ಕಳೆದು ಕೊಳ್ಳುತ್ತೀರಿ, ಆದುದರಿಂದ ಎಲ್ಲಾ ಸದಸ್ಯರು ತಪ್ಪದೇ

1) ಕಡ್ಡಾಯವಾಗಿ ಷೇರು ಹಣ ರೂ.2,000-00 ಕ್ಕಿಂತ ಕಡಿಮೆ ಇರುವ ಸದಸ್ಯರು ರೂ.2,000-00 ಕ್ಕೆ ಹೆಚ್ಚಿಸಿಕೊಳ್ಳಲು ವಿನಂತಿಸಲಾಗಿದೆ. ಹೆಚ್ಚಿಸಿಕೊಳ್ಳದಿದ್ದಲ್ಲಿ ಷೇರು ಹಣವನ್ನು ಅಮಾನತ್ ಖಾತೆಗೆ ವರ್ಗಾಯಿಸಲಾಗುವುದು.
2) ಕಡ್ಡಾಯವಾಗಿ ವಾರ್ಷಿಕ ಮಹಾಸಭೆಗೆ ಹಾಜರಾಗಲು ಸೂಚಿಸಿದೆ ಹಾಗೂ ಹಾಜರಿ ಪುಸ್ತಕಕ್ಕೆ ಸಹಿ ಮಾಡಲು ಸೂಚಿಸಿದೆ.
3) ಬ್ಯಾಂಕು ನಿಗದಿಪಡಿಸಿದ ಕನಿಷ್ಟ ವ್ಯವಹಾರವನ್ನು ಮಾಡಲು ಸೂಚಿಸಿದೆ.
4) RBI ನಿರ್ದೇಶನದನ್ವಯ KYC ನಿಯಮವನ್ನು ಪಾಲಿಸಲು ಸೂಚಿಸಿದೆ.

ಸಹಕಾರ ಕಾಯಿದೆ ಪ್ರಕಾರ ಬ್ಯಾಂಕಿನ ವಾರ್ಷಿಕ ಮಹಾಸಭೆಯಲ್ಲಿ ಸದಸ್ಯರು ಗುರುತಿನ ಚೀಟಿ ಹಾಜರು ಪಡಿಸುವುದು ಕಡ್ಡಾಯವಾಗಿರುತ್ತದೆ. ಆದ್ದರಿಂದ ಬ್ಯಾಂಕಿನ ಪ್ರಧಾನ ಕಛೇರಿ ಶಾಖೆಯಲ್ಲಿ ಕೆಲಸದ ವೇಳೆಯಲ್ಲಿ ಬೆಳಿಗ್ಗೆ 10.30 ರಿಂದ ಸಂಜೆ 5.30ರವರೆಗೆ ಸದಸ್ಯರ ಗುರುತಿನ ಚೀಟಿ ನೀಡಲು ವ್ಯವಸ್ಥೆಯನ್ನು ಮಾಡಲಾಗಿದೆ ಗುರುತಿನ ಚೀಟಿ ಪಡೆಯಲು ಸೂಚಿಸಿದೆ.

ಸದಸ್ಯರ ವಿಳಾಸ ಸರಿಯಿಲ್ಲದ/ಅಪೂರ್ಣ ವಿಳಾಸವಿರುವ ಪ್ರಯುಕ್ತ ವಾರ್ಷಿಕ ವರದಿ ಪುಸ್ತಕಗಳು ವಾಪಾಸ್ ಬರುತ್ತವೆ. ಕಾರಣ ಕೂಡಲೇ ವಿಳಾಸ ಬದಲಾವಣೆಯಾದಲ್ಲಿ KYC ದಾಖಲೆಗಳನ್ನು ಹಾಜರುಪಡಿಸಿ ವಿಳಾಸ ಬದಲಾವಣೆ ಮಾಡಿಕೊಳ್ಳಲು ಸೂಚಿಸಲಾಗಿದೆ ಹಾಗೂ ವಾರಸುದಾರರ ಹೆಸರನ್ನು ನೀಡದ ಷೇರುದಾರರು ವಾರಸುದಾರರ ಹೆಸರನ್ನು ನೀಡಲು ಸೂಚಿಸಿದೆ. ಸದಸ್ಯರು ಮೊಬೈಲ್ ನಂ. ತಮ್ಮ ಇ-ಮೇಲ್ ವಿಳಾಸವನ್ನು ಬ್ಯಾಂಕಿನಲ್ಲಿ ನೋಂದಾಯಿಸಲು ವಿನಂತಿಸಿಕೊಳ್ಳಲಾಗಿದೆ.

ಸಹಿ/- ಅಧ್ಯಕ್ಷರು
ಆಡಳಿತ ಮಂಡಲಿ ಪರವಾಗಿ



**ಸಾರ್ವಜನಿಕ ಪ್ರಕಟಣೆ**

ನಮ್ಮ ಕಕ್ಷಿದಾರರಾದ **ಶಾಹೀನಾ ಬಾನು ಕೋಂ ಲೇಟ್ ಮುಹಿಬುಲ್ಲಾ**, # 73/1, ರಾಂಪೂರ್ ರೋಡ್, ಸಾಸ್ವೇಹಳ್ಳಿ ಗ್ರಾಮ , ಹೊನ್ನಾಳಿ ತಾಲ್ಲೂಕು ದಾವಣಗೆರೆ ಜಿಲ್ಲೆ, ಇವರುಗಳು ಕೊಟ್ಟ ಅಧಿಕಾರ ಮತ್ತು ಮಾಹಿತಿ ಮೇರೆಗೆ ಈ ಮೂಲಕ ನೀಡುವ ಸಾರ್ವಜನಿಕ ಪ್ರಕಟಣೆ ಏನೆಂದರೆ.,

ನಮ್ಮ ಕಕ್ಷಿದಾರರು ಪ್ರತಿವಾದಿಗಳಾದ **ಬಲ್ಕೀಸ್ ಬಾನು ಕೋಂ ಸಮೀವುಲ್ಲಾ ಖಾನ್, ಅಯ್ಯೂಬ್ ಖಾನ್ ಬಿನ್ ಸರ್ವರ್ ಖಾನ್, ನೂರ್ ಬೀ, ಶಾಹೀದಾ ಬೀ, ಸಲೀಮಾ ಬೀ**, ಮುಂತಾದವರುಗಳ ಮೇಲೆ ಹರಿಹರ ಸಿವಿಲ್ ಜಡ್ಜ್ (ಹಿರಿಯ ವಿಭಾಗ) ಒ.ಎಸ್. ನಂ-146/2022 ರ ಇವರ ನ್ಯಾಯಾಲಯದಲ್ಲಿ ಡಿಕ್ಲರೇಷನ್ ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ಈ ನೋಟಿಸಿನ ಅನುಸೂಚಿ ಆಸ್ತಿಯಲ್ಲಿ ಸಾರ್ವಜನಿಕರು ಮೇಲ್ಕಾಣಿಸಿದವರೊಡನೆ ಯಾವುದೇ ರೀತಿಯಲ್ಲಿ ವ್ಯವಹಾರ, ವಗೈರೆ ಮಾಡಬಾರದಾಗಿ ಮತ್ತು ಅದರಲ್ಲಿ ಅತಿಕ್ರಮ ಪ್ರವೇಶ ಮಾಡಿ, ಮನೆಗಳನ್ನು ಕಟ್ಟಲು ಪ್ರಯತ್ನಿಸಬಾರದಾಗಿ ಈ ಮೂಲಕ ತಿಳಿಸಿದೆ. ಒಂದು ವೇಳೆ ಆ ರೀತಿ ಕಾನೂನು ಬಾಹಿರವಾಗಿ ಪರಭಾರೆ, ವಗೈರೆ ಮಾಡಿಕೊಂಡು ಮನೆಗಳನ್ನು ಕಟ್ಟಿಕೊಂಡರೆ ಅದಕ್ಕೆ ನಮ್ಮ ಕಕ್ಷಿದಾರರು ಜವಾಬ್ದಾರರಾಗುವುದಿಲ್ಲ ಅಂತ ಮಾಡಿದ ಸಾರ್ವಜನಿಕ ಪ್ರಕಟಣೆ ಆಗಿದೆ.

ಸದರಿ ಪ್ರಕಟಣೆಯಲ್ಲಿ ನಮೂದಿಸಿರುವ ಸಾಸ್ವೇಹಳ್ಳಿ ಗ್ರಾಮದ ವಾಸಿ **ಶಾಹೀನಾಬಾನು ಕೋಂ ಮುಹಿಬುಲ್ಲಾ** ಮತ್ತು ನಮ್ಮ ಕಕ್ಷಿದಾರರು ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿದ್ದು, ಸದರಿ ಆಸ್ತಿಯಲ್ಲಿ ಬೇರೆಯವರು ಅತಿಕ್ರಮಣ, ಕಟ್ಟಡ ನಿರ್ಮಾಣ ಮಾಡುವುದಾಗಲೀ, ಮಾರಾಟ ಮಾಡಲು ಯಾರದೂ ಯಾವುದೇ ರೀತಿ ತಂಟೆ-ತಕರಾರು ಮಾಡಬಾರದೆಂದು ಅಂತ ನೀಡಿದ ಸಾರ್ವಜನಿಕ ಪ್ರಕಟಣೆ.

**ಷೆಡ್ಯೂಲ್**

ದಾವಣಗೆರೆ ಜಿಲ್ಲೆ, ಹೊನ್ನಾಳಿ ತಾಲ್ಲೂಕು, ಸಾಸ್ವೇಹಳ್ಳಿ ಗ್ರಾಮದ #73/1, ವಿಸ್ತೀರ್ಣ 3 ಎಕರೆ, 11 ಗುಂಟೆ ಅಡಿವುಳ್ಳ ಪೂರಾ ಜಮೀನಿಗೆ ಚಕ್ಕುಬಂದಿ : ಪೂರ್ವಕ್ಕೆ : = ನಮಾಜು ಕಲ್ಲು ಹೋಗಿರುವ ಹಾದಿ, ಪಶ್ಚಿಮಕ್ಕೆ : ಖಾಜಿ ಮಹಮ್ಮದ್ ಗೌಸ್‌ರವರ ಜಮೀನು, ಉತ್ತರಕ್ಕೆ ರಜಾಕ್ ಸಾಬ್‌ರವರ ಜಮೀನು, ದಕ್ಷಿಣಕ್ಕೆ : ಹನುಮಂತ ದೇವರ ಜಮೀನು

ಇಶ್ರತ್‌ಬಾನು ಹೆಚ್.ಎನ್
ವಕೀಲರು
**ಮೊ : 63631 75269, 81838 47137**



**ಸಾರ್ವಜನಿಕ ಪ್ರಕಟಣೆ**

ನನ್ನ ಕಕ್ಷಿದಾರರಾದ ದಾವಣಗೆರೆ ಸಿಟಿ ಎಂ.ಸಿ.ಸಿ ಎ ಬ್ಲಾಕ್ ವಾಸಿ ಜಿತೇಂದ್ರ ಎನ್. ಬಿನ್ ಲೇಟ್ ಡಿ.ನಂಜಪ್ಪ ಇವರು ದಾವಣಗೆರೆ ಸಿಟಿ, ಎಂ.ಸಿ.ಸಿ. 'ಎ' ಬ್ಲಾಕ್ ವಾಸಿ ಅನಿಲ್ ಕುಮಾರ್ ಕೆ.ಜೆ. ಬಿನ್ ಲೇಟ್ ಕೆ.ಬಿ. ಜಯಣ್ಣ ಇವರುಗಳಿಂದ ಈ ಕೆಳಗಿನ ಷೆಡ್ಯೂಲ್ ಸ್ವತ್ತನ್ನು ಖರೀದಿಸುತ್ತಿದ್ದು,

ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗಳಿಗೆ ಸಂಬಂಧಿಸಿದ ಯಾವುದೇ ರೀತಿಯ ಕ್ರಯ, ದಾನ, ಅಡಮಾನ, ಭೋಗ್ಯ, ಬಾಡಿಗೆ, ಗುತ್ತಿಗೆ, ಜೀವನಾಂಶ, ಮೈನರ್ ಹಕ್ಕು, ಪಾಲು, ಶೀರ್ಷಿಕೆ, ಇತ್ಯಾದಿ ಹಕ್ಕು ಆಸಕ್ತಿ ಇದ್ದಲ್ಲಿ ದಾವೆ ವ್ಯಾಜ್ಯಗಳಿದ್ದಲ್ಲಿ ಹಾಗೂ ಮಾರಾಟದ ಬಗ್ಗೆ ಕರಾರು, ಜಿಪಿಎ ಹಾಗು ಇತರೆ ತಂಟೆ, ತಕರಾರು / ಅಭ್ಯಂತರ ಹಿತಾಸಕ್ತಿಗಳಲ್ಲಿ ಈ ಸಾರ್ವಜನಿಕ ಪ್ರಕಟಣೆಯ ದಿನಾಂಕದಿಂದ 7 ದಿನಗಳ ಒಳಗಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗಿನ ವಿಳಾಸಕ್ಕೆ ಸಂಪರ್ಕಿಸಬಹುದು. ತಪ್ಪಿದಲ್ಲಿ ಯಾರಿಂದಲೂ, ಯಾವುದೇ ವಿಧವಾದ ತಂಟೆ, ತಕರಾರು/ಅಭ್ಯಂತರ ಇಲ್ಲವೆಂದು ಪರಿಗಣಿಸಲಾಗುವುದು.

**ಷೆಡ್ಯೂಲ್**

ದಾವಣಗೆರೆ ಸಿಟಿ 24ನೇ ವಾರ್ಡ್, ಎಂ.ಸಿ.ಸಿ. ಎ ಬ್ಲಾಕ್, 5ನೇ ಮೇನ್, ಸೈಟ್ ನಂ.367, ಮನೆ ನಂ.2571/1 ಅಳತೆ 60x9 ಅಡಿವುಳ್ಳ ಜಾಗ ಹಾಗೂ ಸದರಿ ಜಾಗದಲ್ಲಿರುವ ಗ್ರೌಂಡ್ ಫ್ಲೋರ್ ಹಾಗೂ ಫಸ್ಟ್ ಫ್ಲೋರ್‌ನಲ್ಲಿರುವ ಮನೆ ಹಾಗೂ 2ನೇ ಫ್ಲೋರ್‌ನಲ್ಲಿರುವ ಒಂದು ರೂಂ ಸಹಿತವಾದ ಆರ್‌ಸಿಸಿ ರೂಫಿಂಗ್‌ವುಳ್ಳ ವಾಸದ ಮನೆ, ಇದಕ್ಕೆ ಚಕ್ಕುಬಂದಿ : ಪೂರ್ವಕ್ಕೆ ಸೈಟ್ ನಂ.358ರಲ್ಲಿರುವ ಮನೆ, ಪಶ್ಚಿಮಕ್ಕೆ 30 ಅಡಿ ಮೇನ್ ರೋಡು, ಉತ್ತರಕ್ಕೆ ಸೈಟ್ ನಂ. 366ರಲ್ಲಿರುವ ಷಣ್ಮುಖಾಚಾರ್ ಇವರ ಮನೆ, ದಕ್ಷಿಣಕ್ಕೆ ಡೋರ್ ನಂ. 2571/2 ಎನ್.ಪ್ರಸನ್ನ ಬಿನ್ ನಂಜಪ್ಪ ಇವರ ಮನೆ.

ಕಕ್ಷಿದಾರರ ಪರ ವಕೀಲರು
**ಪ್ರಸನ್ನ ಕುಮಾರ್ ಡಿ.ಪಿ.**
ವಕೀಲರು
#3682/ಎ30 ತರಳಬಾಳು ಬಡಾವಣೆ ದಾವಣಗೆರೆ.
**ಮೊ : 94482 33144**

# ಸಮಯಕ್ಕೆ ಸರಿಯಾಗಿ ಸಿಗದ ವೇತನ

## ಯುಬಿಡಿಟಿ ಕಾಲೇಜಿನ ಹೊರಗುತ್ತಿಗೆ ನೌಕರರ ಪ್ರತಿಭಟನೆ



ದಾವಣಗೆರೆ, ಸೆ.6- ಸಮಯಕ್ಕೆ ಸರಿಯಾಗಿ ವೇತನ ನೀಡದಿರುವುದನ್ನು ಖಂಡಿಸಿ ಇಲ್ಲಿನ ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜಿನ 'ಸಿ' ಮತ್ತು 'ಡಿ' ಗ್ರೂಪ್ ಹೊರಗುತ್ತಿಗೆ ನೌಕರರ ಸಂಘದ ನೇತೃತ್ವದಲ್ಲಿ ಇಂದಿನಿಂದ ನೌಕರರು ಅನಿರ್ದಿಷ್ಟಾವಧಿ ಹೋರಾಟ ಕೈಗೊಂಡಿದ್ದಾರೆ.

ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜಿನ ಮುಖ್ಯ ದ್ವಾರದಲ್ಲಿ ಜಮಾಯಿಸಿದ್ದ ಪ್ರತಿಭಟನಾಕಾರರು, ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡಿರುವ ಬೆಂಗಳೂರು ಮೂಲದ ಖಾಸಗಿ ಕಂಪನಿಯು ಸರ್ಕಾರ ನಿಗದಿಪಡಿಸಿದ ಕನಿಷ್ಠ ವೇತನ ನೀಡದೇ ತಾರತಮ್ಯ, ವಿಳಂಬ ನೀತಿ ಅನುಸರಿಸುತ್ತಿದೆ ಎಂದು ಆರೋಪಿಸಿ ಸಂಜೆವರೆಗೂ ಪ್ರತಿಭಟನಾ ಧರಣಿ ನಡೆಸಿದರು.

ಸರ್ಕಾರವು ನಿಗದಿ ಮಾಡಿದಂತೆ ಆಗಸ್ಟ್ 2022ರಿಂದ ವೇತನ ನೀಡಬೇಕೆಂದು ಆದೇಶ ಹೊರಡಿಸಿದೆ. ಪ್ರತಿ ತಿಂಗಳು 5 ರೊಳಗೆ ವೇತನ ನೀಡಬೇಕು. ಹೊರಗುತ್ತಿಗೆ ನೌಕರರಿಗೆ ಈ ಹಿಂದೆ ನೀಡಿದಂತೆ ಕಾರ್ಯ ನಿರ್ವಹಿಸುತ್ತಿರುವ ಹುದ್ದೆಯ ಪದನಾಮವನ್ನು ನಮೂದಿಸಬೇಕು ಎಂದು ಆಗ್ರಹಿಸಿದರು.

ಮೊದಲಿನಂತೆ ವಿಭಾಗಗಳಲ್ಲಿ ಹಾಜರಾತಿ ನಿರ್ವಹಿಸಬೇಕು. ಪ್ರತಿ ತಿಂಗಳು ವೇತನ ಚೀಟಿ ನೀಡಬೇಕು. ಪ್ರತಿ ತಿಂಗಳು ಹೊರಗುತ್ತಿಗೆ ನೌಕರರ ಇಪಿಎಫ್ ಮತ್ತು ಇಎಸ್‌ಐ ಕಟ್ಟಬೇಕು. ಅಲ್ಲದೇ ಈ ಹಿಂದಿನ ಬಾಕಿಯಿರುವ ಇಪಿಎಫ್ ಅನ್ನು ಕಟ್ಟಬೇಕು. ಭದ್ರತಾ ಸಿಬ್ಬಂದಿಗಳಿಗೆ ತಿಂಗಳಲ್ಲಿ 1 ದಿನದ ಸಿಎಲ್ ರಜಾ ಸೌಲಭ್ಯವನ್ನು ನೀಡಬೇಕು. ರಾಜ್ಯ ಸರ್ಕಾರದ ಕಾರ್ಮಿಕ ಇಲಾಖೆಯು ಪ್ರತೀ ವರ್ಷದ ಏಪ್ರಿಲ್ ತಿಂಗಳಿನಿಂದ ವಾರ್ಷಿಕ ಸಾಲಿನ ಕನಿಷ್ಟ ವೇತನಕ್ಕೆ ವಿಡಿಎ ಮೊತ್ತವನ್ನು ಹೆಚ್ಚಿಸಬೇಕು. ಅಲ್ಲದೇ ಈ ಹಿಂದಿನ ಹೆಚ್ಚುವರಿ ಮೊತ್ತವನ್ನು ನೀಡಬೇಕು. ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜಿನ ಸಿ ಮತ್ತು ಡಿ ಗ್ರೂಪ್ ಹೊರಗುತ್ತಿಗೆ ನೌಕರರನ್ನು ಸಂಚಿತ ವೇತನದಡಿ ನೇಮಿಸಿಕೊಳ್ಳಬೇಕು. ಕಾರ್ಪೆಂಟರ್, ಪ್ಲಂಬರ್‌ಗಳಿಗೆ ಕನಿಷ್ಠ ವೇತನ ನೀಡಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಂಘದ ಅಧ್ಯಕ್ಷ ಮಂಜುನಾಥ್ ಕೈದಾಳೆ, ಕಾರ್ಯದರ್ಶಿ ತಿಪ್ಪೇಸ್ವಾಮಿ ಅಣಬೇರು, ಶಿವಾಜಿರಾವ್, ಕರಿಬಸಪ್ಪ, ವಿರೂಪಾಕ್ಷಪ್ಪ, ಕವಿತಾ, ರೇಣುಕಾ, ಅಜ್ಜಪ್ಪ, ಆಸಿಫುಲ್ಲಾ, ಬಸವರಾಜ್, ಮರಳುಸಿದ್ದಪ್ಪ, ರವಿ, ಕೀರ್ತಿ, ಪರಮೇಶ್ವರಪ್ಪ, ಮಲ್ಲಪ್ಪ ಬಿ. ತಿಗರಿ, ಎನ್. ಸೂರ್ಯಪ್ರಕಾಶ್, ಮಂಜುನಾಥ ಮೇಟಿ, ಬಿ.ಟಿ. ಬಾಲರಾಜ, ಗಂಗಮ್ಮ, ಎ. ಕುಮಾರ, ಪ್ರಸನ್ನ, ಹೆಚ್. ಅಂಜನಿ, ವಿನಯ್, ಮಂಜುನಾಥ, ವಿಜಯ ಕುಮಾರ, ರಾಘವೇಂದ್ರ, ಅಕ್ಕಮಹಾದೇವಿ, ತುಕಾರಾಂ, ಬಸವರಾಜ ಶ್ಯಾವಿ, ವಿಶ್ವನಾಥ್, ಮೌನೇಶ್ವರ ಸೇರಿದಂತೆ ಇತರರು ಇದ್ದರು.

## ನೌಕರರಿಗೆ ಬಂಪರ್ ಕೊಡುಗೆ

(1ನೇ ಪುಟದಿಂದ) ಸುಧಾರಣಾ ಇಲಾಖೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮುಂಗಡ ಪತ್ರದಲ್ಲಿ ನೀಡಿದ ಭರವಸೆಯಂತೆ ನೌಕರರ ವೇತನ ಪರಿಷ್ಕರಣೆ ಮಾಡುತ್ತಿದ್ದೇನೆ ಎಂದರು.

**ವೇತನ - ಭತ್ಯೆಗಾಗಿ ಏಳನೇ ವೇತನ ಆಯೋಗ ರಚನೆ**

ಕೇಂದ್ರ ಸರ್ಕಾರ ಈಗಾಗಲೇ ವೇತನ ಪರಿಷ್ಕರಣೆ ಮಾಡಿದೆ. ಪ್ರಸಕ್ತ ವಿದ್ಯಮಾನಗಳನ್ನು ಗಮನದಲ್ಲಿಟ್ಟುಕೊಂಡು ನಮ್ಮ ನೌಕರರಿಗೂ ಸವಲತ್ತುಗಳನ್ನು ಹೆಚ್ಚಿಸಲು ಇಂತಹ ಕ್ರಮಕ್ಕೆ ಮುಂದಾಗಿದ್ದೇನೆ. ಆಯೋಗದ ವರದಿ ಬರುತ್ತಿದ್ದಂತೆ ನೌಕರರ ವೇತನ ಸೇರಿದಂತೆ ಎಲ್ಲ ಹಂತದಲ್ಲೂ ಪರಿಷ್ಕರಣೆಯಾಗಲಿವೆ ಎಂದರು.

ನೌಕರರ ಇನ್ನುಳಿದ ಬೇಡಿಕೆಗಳನ್ನು ಈಡೇರಿಸಲು ಪ್ರಯತ್ನಿಸುವ ಭರವಸೆ ನೀಡಿದ ಅವರು, ಕಾರ್ಯಾಂಗ ಉತ್ತಮವಾಗಿ ಕೆಲಸ ಮಾಡಿದರೆ, ನಾಡು ಅಭಿವೃದ್ಧಿಯಾಗುತ್ತದೆ. ನಾಡಿನ ಅಭಿವೃದ್ಧಿಯಲ್ಲಿ ನೌಕರರ ಪಾತ್ರ ಪ್ರಮುಖವಾಗಿದೆ ಎಂದರು.

ಸರ್ಕಾರಿ ನೌಕರರು ಆತ್ಮಸಾಕ್ಷಿಯಾಗಿ ಕೆಲಸ ಮಾಡಬೇಕು, ಆಗ ರಾಜ್ಯ ಸುಭಿಕ್ಷವಾಗುತ್ತದೆ. ಕರ್ತವ್ಯಕ್ಕೂ- ಕಾಯಕಕ್ಕೂ ಬಹಳ ವ್ಯತ್ಯಾಸವಿದೆ. ಕರ್ತವ್ಯವೆಂದರೆ ನಮ್ಮ ಕೆಲಸವಷ್ಟೇ ಮಾಡಬಹುದು. ಕಾಯಕ ಎಂದರೆ ಜವಾಬ್ದಾರಿಯಿಂದ ಕೆಲಸ ಮುಗಿಯುವವರೆಗೂ ಮಾಡುವುದು ಎಂದರು.

ಜನಸಾಮಾನ್ಯರು ನಮಗೆ ಸಂಬಳ ಕೊಡುತ್ತಿದ್ದಾರೆ, ಅವರೇ ನಮ್ಮ ಮಾಲೀಕರು, ಅವರು ಕಚೇರಿಗೆ ಬಂದಾಗ ಅಲೆಸುವ ಕೆಲಸ ಮಾಡಬೇಡಿ ಎಂದು ಕಿವಿಮಾತು ಹೇಳಿದರು.

ಸರ್ಕಾರಿ ನೌಕರರಿಗೆ ಆರೋಗ್ಯ ಸಂಜೀವಿನಿ ಯೋಜನೆ ಮಾಡಿದ್ದೇವೆ. ವೇತನ ಪರಿಷ್ಕರಣೆಯೂ ಸದ್ಯದಲ್ಲೇ ಆಗಲಿದೆ. ಸರ್ಕಾರ ಪುಣ್ಯಕೋಟಿ ಯೋಜನೆಯಡಿ 50 ಕೋಟಿ ರೂ. ವೆಚ್ಚದಲ್ಲಿ ಹೊಸ ಗೋಶಾಲೆಗಳನ್ನು ಮಾಡುತ್ತಿದ್ದೇವೆ. ನೌಕರರು, ವಿಶೇಷವಾಗಿ ಪತ್ರಾಂಕಿತ ಎ ಮತ್ತು ಬಿ ಗುಂಪಿನ ನೌಕರರು, ಪುಣ್ಯಕೋಟಿ ಯೋಜನೆಯಡಿ 11,000 ರೂಪಾಯಿ ನೀಡಿ, ಗೋವುಗಳನ್ನು ದತ್ತು ಪಡೆದು, ಗೋ ಸಂರಕ್ಷಣೆ ಮಾಡುವಂತೆ ಮನವಿ ಮಾಡಿದರು.

## ಹಾದು ಹೋದ ಭಾವ

ಸರಳ ಸುಂದರ
ಪದಗಳ ಹಾರ ಕವನವಲ್ಲವೇ?
ಒಳ ಅರ್ಥ, ವಿಮರ್ಶನೆ
ಇದ್ದರೆ ಮಾತ್ರ ಕವನವೇ?
ಆದಿ ಅಂತ್ಯದಲ್ಲಿ
ಪ್ರಾಸವಿದ್ದರೆ ಸಾಕೆ ಕವನವೆನ್ನಲು?
ತ್ರಿಪದಿ,ಷಟ್ಪದಿ
ಇತ್ಯಾದಿಗಳಿದ್ದರೆ ಮಾತ್ರ ಕವನವೇ?
ಪದಗಳೊಡನೆ ಆಡಬಲ್ಲವ
ಹಾಡಿದ್ದೆಲ್ಲ ಕವನವೇ?
ಕ್ಲಿಷ್ಟ ಪದಗಳ ಜೋಡಿಸಿ
ಅರ್ಥಕ್ಕೆ ತಲೆ ಕೆರೆದರೆ ಕವನವೇ?
ಒಳಗಿನ ಅರಿವು
ಹೊರಹರಿದರೆ ಕವನವಲ್ಲವೇ?
ಬದುಕಿನ ದಿಕ್ಕನ್ನೇ
ಬದಲಿಸಿದ ಸಾಲು ಮಾತ್ರ ಕವನವೇ?
ಕವನ ಎಂದರೆ
ಹೌದಲ್ಲವೇ ಜಯಂತ ಕಾಯ್ಕಿಣಿಯವರು!
ಎಂದೆಂದಿಗೂ ಬೇಕಲ್ಲವೇ
ಕುವೆಂಪು, ಬೇಂದ್ರೆಯವರು!
ಹೆತ್ತವರಿಗೆ ಹೆಗ್ಗಣ
ಮುದ್ದು ಎಂದು ಹೇಳಿರುವಾಗ
ಓದುಗ ಮೆಚ್ಚುತಿರಲು
ಬರೆದ ಸಾಲೆಲ್ಲವೂ ಕವನವೇ !?
ಓದಲು, ಮೈ ಜುಮ್ಮೆನ್ನುವ
ಭಾವನೆಗಳ ಬಸಿರೇ ಕವನವಲ್ಲವೇ!!
ಸೋತಾಗ ಬದುಕಿನಲ್ಲಿ,ಒಂದಿಷ್ಟು
ಸ್ಫೂರ್ತಿ ತುಂಬುವುದು ಕವನವಲ್ಲವೇ!!

- ಡಾ. ಉಷಾ ಎಂ.ಜಿ.
ಜೆ.ಜೆ. ಎಂ. ಮೆಡಿಕಲ್ ಕಾಲೇಜು, ದಾವಣಗೆರೆ.

## ನೆರೆಗೆ ಸಿಲುಕಿದ ಬೆಂಗಳೂರು

**ಮನೆಯಿಂದಲೇ ಕೆಲಸಕ್ಕೆ ಐ.ಟಿ. ಕಂಪನಿಗಳ ನಿರ್ಧಾರ**

ಬೆಂಗಳೂರು, ಸೆ. 6 – ಕೊರೊನಾ ಕಾರಣದಿಂದಾಗಿ ಮನೆಯಿಂದ ಕೆಲಸ ಮಾಡಲು ತಿಳಿಸಿದ್ದ ಬೆಂಗಳೂರಿನ ಐ.ಟಿ. ಕಂಪನಿಗಳು, ಈಗ ನೆರೆ ಕಾರಣದಿಂದಾಗಿ ಮನೆಯಿಂದಲೇ ಕೆಲಸ ಮಾಡಲು ತಮ್ಮ ಉದ್ಯೋಗಿಗಳಿಗೆ ತಿಳಿಸಿವೆ.

ಐ.ಟಿ. ಕಂಪನಿಗಳಿರುವ ರಸ್ತೆಗಳು ಜಲಾವೃತವಾಗಿದ್ದರೆ, ವಿದ್ಯುತ್ ಪೂರೈಕೆಯಲ್ಲೂ ವ್ಯತ್ಯಯವಾಗುತ್ತಿದೆ.

ನಗರದ ಹಲವಾರು ಭಾಗಗಳು ನೀರಿನಲ್ಲಿ ಮುಳುಗಿವೆ. ಆದರೆ, ಸಾಕಷ್ಟು ಐ.ಟಿ. ಕಂಪನಿಗಳು ಈ ಹಿಂದೆಯೂ ಮನೆಯಿಂದಲೇ ಕೆಲಸ ನಿರ್ವಹಿಸುವ ಅನುಭವ ಹೊಂದಿವೆ. ಹೀಗಾಗಿ ಉದ್ಯೋಗಿಗಳಿಗೆ ಮನೆಯಿಂದಲೇ ಕೆಲಸ ಮಾಡಲು ತಿಳಿಸಲಾಗುತ್ತಿದೆ.

ಆದರೆ, ಸಂಶೋಧನೆ ಹಾಗೂ ಅಭಿವೃದ್ಧಿ ವಲಯದ ಹಲವಾರು ಟೆಕ್ ಕಂಪನಿಗಳಿಗೆ ಪ್ರಯೋಗಾಲಯಗಳಲ್ಲಿ ಕಾರ್ಯ ನಿರ್ವಹಣೆ ಅನಿವಾರ್ಯವಾಗಿದೆ. ಹೀಗಾಗಿ ಈ ಕಂಪನಿಗಳು ಸಮಸ್ಯೆ ಎದುರಿಸುತ್ತಿವೆ. ಐ.ಟಿ. ದೈತ್ಯ ಕಂಪನಿಯಾದ ವಿಪ್ರೋ, ತನ್ನ ಉದ್ಯೋಗಿಗಳು ಮನೆಯಿಂದಲೇ ಕಾರ್ಯ ನಿರ್ವಹಿಸಲು ಸಲಹೆ ನೀಡಿದೆ.

ಮೀಡಿಯಾ ಟೆಕ್, ಫ್ಲಿಪ್‌ಕಾರ್ಟ್, ಮೀಶೋ ಸೇರಿದಂತೆ ಹಲವಾರು ಕಂಪನಿಗಳು ಮನೆಯಿಂದಲೇ ಕೆಲಸಕ್ಕೆ ಆದ್ಯತೆ ನೀಡಿವೆ.

## ಕೊರೊನಾದ ನಾಸಿಕ ಲಸಿಕೆಗೆ ಅನುಮತಿ

ನವದೆಹಲಿ, ಸೆ. 6 – ಭಾರತ್ ಬಯೋಟೆಕ್‌ನ ಮೂಗಿನ ಮೂಲಕ ನೀಡಲಾಗುವ ಕೊರೊನಾ ಲಸಿಕೆಗೆ ಔಷಧ ನಿಯಂತ್ರಕವಾದ ಡಿಸಿಜಿಐ ಒಪ್ಪಿಗೆ ನೀಡಿದೆ. 18 ವರ್ಷದ ಮೇಲಿನವರಿಗೆ ತುರ್ತು ಬಳಕೆಗಾಗಿ ಔಷಧಿಗೆ ಅನುಮತಿ ನೀಡಲಾಗಿದೆ.

ನಾಸಿಕ ಲಸಿಕೆಗೆ ಅನುಮತಿ ದೊರೆತಿರುವುದು ಕೊರೊನಾ ವಿರುದ್ಧದ ಹೋರಾಟದಲ್ಲಿ ದೊಡ್ಡ ಮುನ್ನಡೆ ಎಂದು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ತಿಳಿಸಿದ್ದಾರೆ. ಹೈದರಾಬಾದ್‌ನ ಭಾರತ್ ಬಯೋಟೆಕ್ ಕಂಪನಿಯು 4,000 ಸ್ವಯಂ ಸೇವಕರಲ್ಲಿ ನಾಸಿಕ ಲಸಿಕೆಯ ಪ್ರಯೋಗ ಪೂರೈಸಿದೆ. ಯಾರಲ್ಲೂ ಅಡ್ಡ ಪರಿಣಾಮಗಳು ಕಂಡು ಬಂದಿಲ್ಲ ಎಂದು ಕಂಪನಿಯ ಮೂಲಗಳು ತಿಳಿಸಿವೆ.

## ಇನ್ಫೋಸಿಸ್‌ನಿಂದ ವ್ಯಾಸಂಗ

(1ನೇ ಪುಟದಿಂದ) ಒಡಂಬಡಿಕೆ ಮಾಡಿಕೊಂಡವು. ಒಡಂಬಡಿಕೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಉನ್ನತ ಶಿಕ್ಷಣ ಸಚಿವ ಡಾ. ಅಶ್ವತ್ಥ್‌ನಾರಾಯಣ್ ಈ ಕೋರ್ಸ್‌ಗಳನ್ನು ಆನ್ ಲೈನ್ ನಲ್ಲಿ ಕಲಿಯಬಹುದು. ಜತೆಗೆ, ಅದು 800ಕ್ಕೂ ಹೆಚ್ಚು ಶಿಕ್ಷಣ ಪರಿಣತರ ನೆರವನ್ನು ಉನ್ನತ ಶಿಕ್ಷಣ ಕಲಿಯುತ್ತಿರುವ ವಿದ್ಯಾರ್ಥಿಗಳು ಮತ್ತು ಬೋಧಕ ವೃಂದಕ್ಕೆ ನೀಡಲಿದೆ ಎಂದರು. ಈ ಸಲುವಾಗಿ ಇನ್ಫೋಸಿಸ್ ಸುಮಾರು ನೂರು ಕೋಟಿ ಖರ್ಚು ಮಾಡಿರುವುದು ಮೆಚ್ಚುವಂತಹದ್ದು ಎಂದು ಅವರು ಹೇಳಿದರು.

## 'ಕುಶಿಯಾರಾ' ನೀರು ಹಂಚಿಕೆಗೆ ಒಪ್ಪಂದ

ನವದೆಹಲಿ, ಸೆ. 6 – ಕುಶಿಯಾರಾ ನದಿ ನೀರು ಹಂಚಿಕೆಗೆ ಸಂಬಂಧಿಸಿದಂತೆ ಭಾರತ ಮತ್ತು ಬಾಂಗ್ಲಾದೇಶಗಳು ಮಧ್ಯಂತರ ಒಪ್ಪಂದಕ್ಕೆ ಸಹಿ ಹಾಕಿವೆ. 1996ರಲ್ಲಿ ಗಂಗಾ ನದಿ ಒಪ್ಪಂದಕ್ಕೆ ಸಹಿ ಹಾಕಿದ ನಂತರ, ಉಭಯ ದೇಶಗಳು ನದಿ ನೀರು ಹಂಚಿಕೆಗೆ ಒಪ್ಪಂದ ಮಾಡಿಕೊಂಡಿರುವುದು ಇದೇ ಮೊದಲು.

ಈ ಸಂದರ್ಭದಲ್ಲಿ ಮಾತನಾಡಿರುವ ಬಾಂಗ್ಲಾದೇಶದ ಪ್ರಧಾನ ಮಂತ್ರಿ ಶೇಖ್ ಹಸೀನಾ, ಭಾರತ ಮತ್ತು ಬಾಂಗ್ಲಾದೇಶಗಳು 54 ನದಿಗಳನ್ನು ಹಂಚಿಕೊಳ್ಳುತ್ತವೆ. ದಶಕಗಳಿಗೂ ಹೆಚ್ಚು ಕಾಲದಿಂದ ನೆನೆಗುದಿಯಲ್ಲಿರುವ ಟೀಸ್ಟಾ ನದಿ ಹಂಚಿಕೆ ಒಪ್ಪಂದಕ್ಕೂ ಸಹಿ ಹಾಕಬೇಕಿದೆ ಎಂದಿದ್ದಾರೆ. ಈ ಒಪ್ಪಂದವನ್ನು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ವಿರೋಧಿಸುತ್ತಿದ್ದಾರೆ. ಕುಶಿಯಾರಾ ನದಿ ಒಪ್ಪಂದದಿಂದಾಗಿ ಅಸ್ಸಾಂನ ದಕ್ಷಿಣ ಭಾಗದಲ್ಲಿರುವ ಜನರು ಹಾಗೂ ಬಾಂಗ್ಲಾದೇಶದ ಸಿಲ್ಹೆಟ್ ವಿಭಾಗದಲ್ಲಿರುವ ಜನರಿಗೆ ಅನುಕೂಲವಾಗಲಿದೆ.

## ರಾಣೇಬೆನ್ನೂರು ತಾಲ್ಲೂಕಿನಲ್ಲಿ ಇಂದು ವಿದ್ಯುತ್ ವ್ಯತ್ಯಯ

ಗದಗ-ಹೊನ್ನಾಳಿ ರಸ್ತೆ ಅಗಲೀಕರಣದ ಪ್ರಯುಕ್ತ 33/11 ಕೆವಿ ಗುಡುಗೂರು-ಮೈದೂರು ಉಪ ಕೇಂದ್ರದಿಂದ ಹೊರಡುವ ಎಫ್-01 ದೇವರಗುಡ್ಡ, ಎಫ್-07 ಮಾಲತೇಶ ಎನ್‌ಜೆವೈ, ಎಫ್-14 ಹುಲ್ಲತ್ತಿ ಎನ್‌ಜೆವೈ ಮತ್ತು ಎಫ್-15 ಗುಡ್ಡದ ಆನವೇರಿ ಫೀಡರ್‌ನಿಂದ ಗ್ರಾಹಕರಿಗೆ ಇಂದು ಬೆಳಿಗ್ಗೆ 11 ರಿಂದ ಸಂಜೆ 6 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ. ದೇವರಗುಡ್ಡ, ಶಿಡಗನಾಳ, ಚನ್ನಾಪುರ ತಾಂಡಾ, ಗುಡುಗೂರು ತಾಂಡಾ, ಗುಡ್ಡದ ಆನವೇರಿ, ಹುಲ್ಲತ್ತಿ, ಕಾಕೋಳ, ಕಾಕೋಳ ತಾಂಡಾ, ಕಜ್ಜರಿ ಗ್ರಾಮಗಳ ಮತ್ತು ಸದರಿ ಫೀಡರ್‌ಗಳ ಮೇಲೆ ಬರುವ ಕ್ರಷರ್‌ಗಳ ಮತ್ತು ದೇವರಗುಡ್ಡ, ಶಿಡಗನಾಳ, ಕಜ್ಜರಿ, ಗುಡ್ಡದ ಆನವೇರಿ ಪಂಪ್‌ಸೆಟ್‌ಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

## ಬೆಳ್ಳೂಡಿಯಲ್ಲಿ ನಾಳೆ ಸಭೆ

ಹರಿಹರ, ಸೆ.6- ಕಾಗಿನೆಲೆ ಕನಕಗುರುಪೀಠದ ಬೆಳ್ಳೂಡಿ ಶಾಖಾಮಠದಲ್ಲಿ ನಾಡಿದ್ದು ದಿನಾಂಕ 8ರ ರ ಬೆಳಿಗ್ಗೆ 10.30ಕ್ಕೆ ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ ಸಾನ್ನಿಧ್ಯದಲ್ಲಿ ಹರಿಹರ ತಾಲ್ಲೂಕಿನ ಕುರುಬ ಸಮಾಜದ ಜಾಗೃತಿ ಸಭೆಯನ್ನು ಕರೆಯಲಾಗಿದೆ ಎಂದು ತಾಲ್ಲೂಕು ಕುರುಬ ಸಮಾಜದ ಕಾರ್ಯದರ್ಶಿ ಕೆ.ಪಿ.ಗಂಗಾಧರ್ ತಿಳಿಸಿದ್ದಾರೆ.

# ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಅಧ್ಯಕ್ಷ ಜಿ.ನಂಜನ ಗೌಡರಿಗೆ ಸನ್ಮಾನ



ದಾವಣಗೆರೆ, ಸೆ. 6- ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಕೇಂದ್ರದ ನೂತನ ಅಧ್ಯಕ್ಷ ಜಿ. ನಂಜನಗೌಡರು ಅವರನ್ನು ಶರಣ ಮಾಗನೂರು ಬಸಪ್ಪ ಸಹಕಾರಿ ನಿಯಮಿತ ಆಡಳಿತ ಮಂಡಳಿಯಿಂದ ಅಧ್ಯಕ್ಷ ಡಾ. ಹೆಚ್.ಎಸ್. ಮಂಜುನಾಥ್ ಅವರ ಅಧ್ಯಕ್ಷತೆಯಲ್ಲಿ ಮತ್ತು ಮಾಗನೂರು ಬಸಪ್ಪ ಪಬ್ಲಿಕ್ ಟ್ರಸ್ಟ್‌ನ ಕಾರ್ಯದರ್ಶಿ ಎಂ.ಬಿ. ಸಂಗಮೇಶ್ವರಗೌಡರ ಸಮ್ಮುಖದಲ್ಲಿ ಇಂದು ಸನ್ಮಾನಿಸಿ, ಗೌರವಿಸಲಾಯಿತು.

ಸನ್ಮಾನಿತ ನಂಜನಗೌಡರು ಮಾತನಾಡಿ, ಸೌಹಾರ್ದ ಸಹಕಾರಿ ಸಂಘಗಳ ಇತ್ತೀಚಿನ ಬೆಳವಣಿಗೆ ಬಗ್ಗೆ ವಿವರವಾಗಿ ತಿಳಿಸಿ, ಅತೀ ಹೆಚ್ಚಿನ ಜವಾಬ್ದಾರಿಯಿಂದ ಕಾರ್ಯಕಾರಿ ಮಂಡಳಿಯವರು ಕಾರ್ಯ ನಿರ್ವಹಿಸಬೇಕೆಂದು ತಿಳಿಸಿದರು.

ಈ ಸಂದರ್ಭದಲ್ಲಿ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಕೇಂದ್ರದ ನಿರ್ದೇಶಕ ಎಂ.ಆರ್. ಪ್ರಭುದೇವ್, ಮಾಗನೂರು ಬಸಪ್ಪ ಸಹಕಾರಿಯ ಉಪಾಧ್ಯಕ್ಷರಾದ ಎಂ.ಎಸ್. ಸುನಂದಾದೇವಿ, ಸಂಘದ ನಿರ್ದೇಶಕರುಗಳಾದ ಎಂ.ಎಸ್. ಮಹೇಶ್‌ಗೌಡರು, ಡಾ. ಲೋಕೇಶ್ ಎನ್. ಒಡೆಯರ್, ಬಿ.ಜಿ. ಹಾಲೇಶ್, ಎಸ್.ಆರ್. ಶಿರಗಂಬಿ, ಡಿ.ಎಂ. ಶಿವಕುಮಾರ್, ಡಾ. ಬಸವರಾಜ ಸೋಮನಹಳ್ಳಿ ಡಾ. ನಾಗರಾಜ್ ನಾಯ್ಕ, ಬಿ. ದಿಳ್ಯಪ್ಪ, ಮುಖ್ಯ ಕಾರ್ಯನಿರ್ವಾಹಕರಾದ ಬಿ. ಹೆಚ್. ಚೇತನ್‌ಕುಮಾರ್, ಸಂಘದ ಮಾರ್ಗದರ್ಶಕರಾದ ಎಂ.ಜಿ. ರಾಜಶೇಖರಯ್ಯ ಮತ್ತಿತರರು ಉಪಸ್ಥಿತರಿದ್ದರು.

## ಬೆಂಗಳೂರು ತತ್ತರಿಸುತ್ತಿರುವಾಗ ಎಂಪಿ ತೇಜಸ್ವಿಗೆ ದೋಸೆ ಆಸೆ

ಬೆಂಗಳೂರು, ಸೆ. 6 – ಧಾರಾಕಾರ ಮಳೆಯಿಂದ ಬೆಂಗಳೂರು ತತ್ತರಿಸುತ್ತಿರುವಾಗ, ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಅವರು ಹೋಟೆಲ್ ಒಂದರ ಬೆಣ್ಣೆ ದೋಸೆ ಪರ ಪ್ರಚಾರ ಮಾಡುತ್ತಿದ್ದಾರೆ ಎಂದು ಕಾಂಗ್ರೆಸ್ ತರಾಟೆಗೆ ತೆಗೆದುಕೊಂಡಿದೆ.

ತೇಜಸ್ವಿ ಸೂರ್ಯ ಹೋಟೆಲ್‌ಗೆ ಭೇಟಿ ನೀಡಿರುವ ವಿಚಾರ ಪ್ರಸ್ತಾಪಿಸಿ ಟ್ವೀಟ್ ಮಾಡಿರುವ ಕಾಂಗ್ರೆಸ್, ಮತಿ ದೋಷ ಇರುವವರನ್ನು ಆಯ್ಕೆ ಮಾಡಿದರೆ, ಜನ ಮುಳುಗುವಾಗ 'ದೋಸೆ' ತಿನ್ನಲು ಹೋಗುತ್ತಾರೆ! ಬೆಂಗಳೂರು ಮುಳುಗಿದೆ, ಜನತೆ ಪರದಾಡುತ್ತಿದ್ದಾರೆ. ಆದರೆ, ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಅವರಿಗೆ ದೋಸೆ ತಿನ್ನುವ ಟೆಂಪ್ಟ್ ಆಗಿದೆಯಂತೆ ! ಎಂದು ತರಾಟೆಗೆ ತೆಗೆದುಕೊಂಡಿದೆ. ಮಕ್ಕಳಾಟ ಆಡಿಕೊಂಡಿದ್ದ ಅಪ್ರಬುದ್ಧರನ್ನು ಸಂಸದರನ್ನಾಗಿಸಿದರೆ ಇನ್ನೇನು ನಿರೀಕ್ಷಿಸಲು ಸಾಧ್ಯ? ಎಂದೂ ಕಾಂಗ್ರೆಸ್ ಪ್ರಶ್ನಿಸಿದೆ.

ಬೆಂಗಳೂರಿನಲ್ಲಿ ಭಾರೀ ಮಳೆಯಿಂದಾಗಿ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಆದರೆ, ಸಂಸದ ಹೋಟೆಲ್‌ವೊಂದರ ಪ್ರಚಾರ ಮಾಡುತ್ತಾ, ದೋಸೆಯ ರುಚಿಯನ್ನು ಸವಿಯುತ್ತಿದ್ದಾರೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ನೆಟ್ಟಿಗರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಂಸದರು ವಿಡಿಯೋ ಒಂದರಲ್ಲಿ ಮಾತನಾಡುತ್ತಾ, 'ಈಗ ನಾನು ಪದ್ಮನಾಭ ನಗರದ ಸಾತ್ವಿ ಕಿಚನ್‌ಗೆ ಬಂದಿದ್ದೆ. ಇನ್‌ಸ್ಟಾಗ್ರಾಮ್‌ನಲ್ಲಿ ದೋಸೆಯ ಫೋಟೋ ನೋಡಿ ಟೆಂಪ್ಟ್ ಆಗಿ ಇಲ್ಲಿಗೆ ಬಂದಿದ್ದೇನೆ. ಬೆಣ್ಣೆ ಮಸಾಲೆ ತುಂಬಾ ಚೆನ್ನಾಗಿದೆ. ನೀವೂ ಬನ್ನಿ. ತಿಂದಾಗ್ಲೇನೆ ಆಸ್ವಾದನೆ ನಿಮಗೆ ಗೊತ್ತಾಗುವುದು. ಉಪ್ಪಿಟ್ಟು ಬಹಳ ಚೆನ್ನಾಗಿದೆ. ಬನ್ನಿ' ಎಂದಿದ್ದಾರೆ.

ಈ ನಡುವೆ ಹೇಳಿಕೆ ನೀಡಿರುವ ತೇಜಸ್ವಿ ಸೂರ್ಯ, ನನ್ನ ಕ್ಷೇತ್ರಗಳಲ್ಲಿ ಎಲ್ಲಿ ಸಮಸ್ಯೆಯಾಗಿದೆಯೋ ಅಲ್ಲಿ ಭೇಟಿ ನೀಡಿದ್ದೇನೆ. ಕೆರೆ ನುಂಗಿ ಲೇಔಟ್ ಮಾಡಿರುವ ಕಾಂಗ್ರೆಸ್‌ನವರಿಂದ ನಾನು ಹೇಳಿಸಿಕೊಳ್ಳಬೇಕಿಲ್ಲ ಎಂದಿದ್ದಾರೆ.

ಭೂಗಳ್ಳರ ಮೇಲೆ ಸರ್ಕಾರ ಹಾಗೂ ನ್ಯಾಯಾಲಯದಿಂದ ತನಿಖೆ ಆಗಬೇಕು. ಜನರ ಕಷ್ಟ – ನೋವುಗಳಿಗೆ ಸ್ಪಂದಿಸುವ ಬಗ್ಗೆ ಕಾಂಗ್ರೆಸ್‌ನಿಂದ ಕಲಿಯುವ ಅವಶ್ಯಕತೆ ಇಲ್ಲ ಎಂದೂ ಹೇಳಿದ್ದಾರೆ.

## ಮಾಜಿ ಸೈನಿಕರ ಮಕ್ಕಳಿಗೆ ನಗದು ಪ್ರಶಸ್ತಿಗಾಗಿ ಅರ್ಜಿ

ದಾವಣಗೆರೆ, ಸೆ. 6- ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿ.ಯು.ಸಿ ಸಾರ್ವತ್ರಿಕ ಪರೀಕ್ಷೆಗಳಲ್ಲಿ ಗರಿಷ್ಟ ಅಂಕ ಪಡೆದ ಕರ್ನಾಟಕದ ಮೂಲ ನಿವಾಸಿ ಮಾಜಿ ಸೈನಿಕರ ಮಕ್ಕಳಿಗೆ ಜನರಲ್ ಕೆ.ಎಸ್. ತಿಮ್ಮಯ್ಯ ನಗದು ಪ್ರಶಸ್ತಿ ನೀಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಶುಲ್ಕ ರಹಿತ ಅರ್ಜಿಗಳನ್ನು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಶಿವಮೊಗ್ಗ ಕಛೇರಿಯಿಂದ ಪಡೆದು ಭರ್ತಿ ಮಾಡಿ, ಅ. 30 ರೊಳಗಾಗಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಕಚೇರಿ ಶಿವಮೊಗ್ಗ ಇಲ್ಲಿಗೆ ಸಲ್ಲಿಸಬೇಕು.

ಮಾಹಿತಿಗಾಗಿ ಶಿವಮೊಗ್ಗ ಕಚೇರಿಯ ದೂರವಾಣಿ ಸಂಖ್ಯೆ 08182-220925 ಯನ್ನು ಸಂಪರ್ಕಿಸಬಹುದೆಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪ ನಿರ್ದೇಶಕರು(ಪ್ರಭಾರ) ತಿಳಿಸಿದ್ದಾರೆ.

## ನಗರದಲ್ಲಿ ಇಂದಿನಿಂದ ರೈತರಿಗೆ ತರಬೇತಿ

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ವತಿಯಿಂದ ಪಶು ಆಸ್ಪತ್ರೆ ಅವರಣದಲ್ಲಿರುವ ರೈತರಿಗೆ ಪಶುಸಂಗೋಪನಾ ಚಟುವಟಿಕೆ ಕುರಿತು ತರಬೇತಿ ಶಿಬಿರ ನಡೆಯಲಿದೆ.

ಇಂದಿನಿಂದ ಇದೇ ದಿನಾಂಕ 13 ರವರೆಗೆ ಕುರಿ ಮತ್ತು ಮೇಕೆ ಸಾಕಾಣಿಕೆ ಬಗ್ಗೆ ತರಬೇತಿ, ಆಧುನಿಕ ಹೈನುಗಾರಿಕೆ ಬಗ್ಗೆ ತರಬೇತಿ ಕಾರ್ಯಕ್ರಮದಲ್ಲಿ ತಲಾ 25 ಜನರಿಗೆ ತರಬೇತಿ ನೀಡುವ ಗುರಿ ಹೊಂದಲಾಗಿದೆ. ವಿವರಕ್ಕೆ ಸಂಪರ್ಕಿಸುವ ದೂರವಾಣಿ 08192-233787.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಬೇಕಾಗಿದ್ದಾರೆ**
ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳವರು ಬೇಕಾಗಿದ್ದಾರೆ. ಸಂಪರ್ಕಿಸಿ :
89046 91084

**ಬಿಲ್ಲಿಂಗ್‌ಗೆ ಬೇಕು**
ಬಟ್ಟೆ ಅಂಗಡಿಯಲ್ಲಿ ಬಿಲ್ಲಿಂಗ್ ಮಾಡಲು ಪಿಯುಸಿ ಆಗಿರುವ ಮತ್ತು ಕಂಪ್ಯೂಟರ್ ಜ್ಞಾನವಿರುವ ಪುರುಷ ಅಭ್ಯರ್ಥಿ ಬೇಕಾಗಿದ್ದಾರೆ.
98442-94446

**ಮನೆ ಬಾಡಿಗೆ ಇದೆ**
ತರಳಬಾಳು ಬಡಾವಣೆ #1926A/13, 2ನೇ ಮೇನ್, 3ನೇ ಕ್ರಾಸ್ ಮೊದಲನೇ ಮಹಡಿಯಲ್ಲಿ 2 ಬೆಡ್ ರೂಂ ಮನೆ ಬಾಡಿಗೆ ಇದೆ
98458 01511

**PART TIME WORK**
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ
ಕೆಲಸ / JOB
ವಾರದ ಸಂಬಳ : 3000 ರಿಂದ 5000 ಮೇಲ್ಪಟ್ಟು. ಕೊರಿಯರ್ ಸೌಲಭ್ಯವಿದೆ.
91084 18233, 97432 17566

**3 ಎಕರೆ ಜಮೀನು ಮಾರಾಟಕ್ಕಿದೆ**
NH-4 (ಹೊಳೆ) ಹರಿಹರ ಹತ್ತಿರ, @Rs 55 Lakhs / Acr
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
Contact : SGK Realtors
M : 63608 66997

**ಆಸ್ಪತ್ರೆಗೆ ರಿಸೆಪ್ಷನಿಸ್ಟ್ ಬೇಕಾಗಿದ್ದಾರೆ**
ಸಂಪರ್ಕಿಸಿ :
98808-53626

**WANTED**
1. Recepionist
2. Staff Nurses
3. Lab Technician
SHILPA DIAGNOSTICS
MCC B Block Near Swimming Pool, Davangere.
98440 65638

**ಸೈಟು ಮಾರಾಟಕ್ಕಿದೆ**
ಸುಬ್ರಮಣ್ಯ ನಗರ, ಹೈಟೆಕ್ ಆಸ್ಪತ್ರೆ ಹತ್ತಿರ ಪುನೀತ್ ಬಡಾವಣೆಯಲ್ಲಿ ಪಶ್ಚಿಮ ಮುಖದ 30x50 ಅಪ್ರೂವ್ಡ್ ಸೈಟ್ ಮಾರಾಟಕ್ಕಿದೆ
97396 71899

**ತಕ್ಷಣ ಬೇಕಾಗಿದ್ದಾರೆ**
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ). MNC ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ, ಯುವತಿಯರು 1386 ಹುದ್ದೆಗಳಿಗೆ ಬೇಕಾಗಿದ್ದಾರೆ. ESI / PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ: 15,000 ರಿಂದ 35,000 ವರೆಗೆ ಕೆಲಸದ ಸ್ಥಳ. ಬೆಂಗಳೂರು
97316 62489

**ಮನೆ ಬಾಡಿಗೆಗೆ**
ವಾಸ್ತು ಪ್ರಕಾರದ, ಪೂರ್ವ ಮುಖದ, ಹೌಸಿಂಗ್ ಬೋರ್ಡ್ ಕಾಲೋನಿ, ಮೆಡಿಕಲ್ ಹಾಸ್ಟೆಲ್ ಪಕ್ಕ, Extended MCC 'B' Block, ಕಾರ್ಪೊರೇಷನ್ ನೀರು, ಬೋರ್, ಕಾರ್ ಪಾರ್ಕಿಂಗ್, ಸ್ವತಂತ್ರವಾದ 3 BHK / 2 BHK ಮನೆ (ಸಸ್ಯಹಾರಿಗಳಿಗೆ ಮಾತ್ರ)
63015 58346

**ಬೇಕಾಗಿದ್ದಾರೆ**
ಟೈಲರಿಂಗ್ ಮಹಿಳೆಯರು ಮತ್ತು ಸಹಾಯಕರು ಬೇಕಾಗಿದ್ದಾರೆ.
ಸಂಪರ್ಕಿಸಿ:
7975324833

**We Repair all types of Gas Geysers**
Sales and Services
Contact:
99019 40727

**Room for Rent**
2nd Floor for Vegetarians Only. MCC 'B' Block, 2nd Main, 6th Cross, 3465/1. Borewell Water Facility Available. Contact :
84719 02526, 98440 84832

**ಹುಡುಗರು ಬೇಕಾಗಿದ್ದಾರೆ**
ವಿದ್ಯಾ ನಗರದಲ್ಲಿ ಇರುವ ಮೆಗಾ ಮಾರ್ಟ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಕೆಲಸದ ಸಮಯ ಬೆಳಿಗ್ಗೆ 9.30 ರಿಂದ ರಾತ್ರಿ 9 ರವರೆಗೆ ಮಧ್ಯಾಹ್ನದ ಊಟದ ಜೊತೆ ಟೀ ಮತ್ತು ಸ್ನ್ಯಾಕ್ಸ್ ವ್ಯವಸ್ಥೆ ಇರುತ್ತದೆ. (ಸಂಬಳ 10,000)
81340 34264, 81975 17215

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು ಇಂದು ದಿ. 07.09.2022ರ ಬುಧವಾರ ನಾಳೆ ದಿ.08.09.2022ರ ಗುರುವಾರ ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಮನೆ ಬಾಡಿಗೆಗೆ ಇದೆ**
3BHK ಮೊದಲನೇ ಮಹಡಿ ಮನೆ ಲೀಸ್‌ಗೆ/ ಬಾಡಿಗೆಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ. ಸಿ.ವಿ ಶಿವಕುಮಾರ್ ಬಳ್ಳಾರಿ ಸಿದ್ದಪ್ಪ ಪಾರ್ಕ್ ಹತ್ತಿರ, ಕೆ.ಬಿ ಬಡಾವಣೆ, ದಾವಣಗೆರೆ-2.
81478 74601
ಸ್ವಂತ ಬೋರ್‌ವೆಲ್ ಇದೆ. ಕಛೇರಿಗೂ ಬಾಡಿಗೆಗೆ ಇದೆ.

**ROOM FOR RENT**
Vidyanagar, Main Road, Davanagere. Contact No.
87227 17316, 87227 17317

**ಸಂಸ್ಥೆಯಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ**
ಹುದ್ದೆ : 1) ಸ್ಟಾಫ್ ನರ್ಸ್ -2, ವಿದ್ಯಾರ್ಹತೆ : ANM / GNM (ಮಹಿಳೆಯರು ಬೇಕಾಗಿದ್ದಾರೆ)
2) ಕಂಪ್ಯೂಟರ್ ಆಪರೇಟರ್ - 1, ವಿದ್ಯಾರ್ಹತೆ : BA (ಪುರುಷ /ಮಹಿಳೆಯರು ಬೇಕಾಗಿದ್ದಾರೆ)
ಮೊ : 79751 99825
ಈ ನಂಬರ್‌ಗೆ ರೆಸ್ಯೂಂ ವ್ಯಾಟ್ಸಪ್‌ಗೆ ಕಳುಹಿಸಿ.

**ಜಮೀನು ಬೇಕಾಗಿರುತ್ತದೆ**
(1ರಿಂದ 20 ಎಕರೆ)
ದಾವಣಗೆರೆ - ಹರಿಹರ
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
Contact : SGK Realtors
M : 63608 66997

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ, NTC : ನರ್ಸರಿ ಟೀಚರ್ಸ್ ಟ್ರೈನಿಂಗ್.
ನೇರ ಪರೀಕ್ಷೆಗಳು
SSLC, PUC, BA, B.Com, MBA
ಶ್ರೀ ಗಂಗೋತ್ರಿ ಕಾಲೇಜ್
ಲಾಯರ್ ರೋಡ್ ದಾವಣಗೆರೆ.
86602 35013

**ಶಿಕ್ಷಕರು/ಶಿಕ್ಷಕಿಯರು ಬೇಕಾಗಿದ್ದಾರೆ**
Part Time/ Full Time
B.A, B.Ed, D.Ed, B,Sc, M.Sc, M.Ed N.T,C
Address: Little Champs Gurukulam, Near H.K.R Circle, Nittuvalli, Davanagere
90609 06039, 98443 32559

**Wanted**
Required only Male Candidate for Accounts Department with Basic Knowledge in Computer with Qualification B.Com Freshers or Any Degree Age 22 to 30
88776 64633

**Required**
office work & reception for PU science college (2 ladies) with accommodation, Boys hostel warden, DTP worker for question paper typing.
Location: Davangere. Contact :
87628 67557, 99168 18369

**AQUA FRESH**
RO WATER PURIFIER AVAILABLE AT JUST 5990/- ONLY
SALES & SERVICE
PLZ CONTACT :
77950 14817

**House For Rent / Lease**
2 BHK & 1 BHK Near Podar International School, J.H Patel Badavane Davanagere
95359 99218, 97426 74310

**WANTED**
Physics Junior Faculty (M.Sc in Physics) Lab Instructor (B.Sc or PU Scince Passed Candidate)
84948 84444

**Wanted**
Accountant for Rice Mill Section with Experience Contact:
99003 75855
91640 00005

**ಆಯಾ ಬೇಕಾಗಿದ್ದಾರೆ**
ಶಾಲೆಗೆ ಆಯಾ ಬೇಕಾಗಿದ್ದಾರೆ
ಸ್ಥಳ : ಕೆ.ಬಿ ಬಡಾವಣೆ
ಸಮಯ : ಬೆ.9ರಿಂದ 5ರವರೆಗೆ
Salary : 5000 to 6000
63616 62669

**ಬೇಕಾಗಿದ್ದಾರೆ**
ಬಾರ್ & ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡಲು ಸಪ್ಲೈಯರ್, ಅಡುಗೆ ಭಟ್ಟರು ಬೇಕಾಗಿದ್ದಾರೆ
97427 69919
84315 41866

**WANTED**
Required a Lady Candidate for Computer Billing with Computer Knowledge and Tally with Qualification: PUC, B.Com or B.A
94484 61674, 97317 48890

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2ವರ್ಷ
ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಯಶಸ್ವಿ 15ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**JOBS**
Sales Manager/Executives any degree (English, Computer Knowledge) Office job/Marketing/ Field work, Male/Female Freshers/experienced
98444 92888

**Required**
Tata power solar
1) B.Com graduates from marketing.
2) Diploma or ITI (Electriccal) for Instalation Solar.
Basavashree Solar Technologies
J.J.M. Complex jayadeva Circle. Dvg. Contact :
99001 42052, 80730 26396

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್
ಫೋ.: 95135 03000

**ಅಡುಗೆ ಮಾಡಲು ಬೇಕಾಗಿದ್ದಾರೆ**
ಹರಿಹರದ ವಿದ್ಯಾನಗರ 'ಎ' ಬ್ಲಾಕ್ 60 ಅಡಿ ರಸ್ತೆಯ ಮನೆಯೊಂದರಲ್ಲಿ ಸಸ್ಯಾಹಾರಿ ಹಾಗೂ ಮಾಂಸಹಾರಿ ಅಡುಗೆ ಮಾಡಲು ಮಹಿಳಾ ಅಡುಗೆಯವರು ಬೇಕಾಗಿದ್ದಾರೆ.
ಸಂಪರ್ಕಿಸಿ
83109 67670, 81055 47878

## 'ಲೈಸೆನ್ಸ್‌ರಾಜ್'ಗೆ ವಿರೋಧ

ದಾವಣಗೆರೆ, ಸೆ. 6- ಸಣ್ಣಪುಟ್ಟ ಗೂಡಂಗಡಿ ವ್ಯಾಪಾಸ್ಥರಿಗೆ ಮಾರಕವಾಗಿರುವ ಲೈಸೆನ್ಸ್ ರಾಜ್ ನಿಯಮವನ್ನು ಜಾರಿಗೊಳಿಸ ಬಾರದು ಎಂದು ತಂಬಾಕು ಉತ್ಪನ್ನಗಳ ಚಿಲ್ಲರೆ ಮಾರಾಟಗಾರರ ಸಂಘದ ಅಧ್ಯಕ್ಷ ರೆಹಮತ್ ಉಲ್ಲಾ ಅವರು ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಸರ್ಕಾರವನ್ನು ಒತ್ತಾಯಿಸಿದ್ದಾರೆ

ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್ 2020ರ ಪ್ರಸ್ತಾವಿತ ಕರಡಿನಲ್ಲಿ ಸಣ್ಣಪುಟ್ಟ ಚಿಲ್ಲರೆ ವ್ಯಾಪಾರಸ್ಥರಿಗೆ ಅನಾನುಕೂಲವಾಗುವ ಅಂಶಗಳಿವೆ ಎಂದರು.

ವ್ಯಾಪಾರ ನಡೆಸಲು ಪಾಲಿಕೆಯಿಂದ ಪರವಾನಿಗೆ ಪಡೆಯುವುದು, ವಿದ್ಯುತ್‌ಸಂಪರ್ಕ ಪಡೆಯುವುದು ಕಡ್ಡಾಯವಾಗಲಿದೆ. ಇದರಿಂದ ಸಣ್ಣಪುಟ್ಟ ಬೀಡಿ ಅಂಗಡಿಗಳು ಮುಚ್ಚುವ ಆತಂಕವಿದೆ. ಬಡ ಅನಕ್ಷರಸ್ಥ ವ್ಯಾಪಾರಿಗಳಿಗೆ ಅಧಿಕಾರಿಗಳ ಕಿರುಕುಳ ಹೆಚ್ಚಾಗಲಿದೆ. ಈ ಹಿನ್ನೆಲೆಯಲ್ಲಿ ನಿಯಮ ಜಾರಿಯ ವಿರುದ್ಧ ನಾಳೆ ದಿನಾಂಕ 7ರಂದು ಬೆಳಿಗ್ಗೆ 11.30ಕ್ಕೆ ಪ್ರತಿಭಟನಾ ಮೆರವಣಿಗೆ ನಡೆಸಲಾಗುವುದು ಎಂದರು. ಪತ್ರಿಕಾಗೋಷ್ಠಿಯಲ್ಲಿ ಸಂಘದ ನಿಂಗಪ್ಪ, ಮಾರುತಿ, ಪರಶುರಾಮ, ನಾಗಪ್ಪ ಮತ್ತಿತರರಿದ್ದರು.

## ವೈದ್ಯಕೀಯ ಶಿಕ್ಷಣ ಅರ್ಜಿ ಆಹ್ವಾನ

ದಾವಣಗೆರೆ, ಸೆ.6- ವೈದ್ಯಕೀಯ ಮತ್ತು ದಂತ ವೈದ್ಯಕೀಯ ಶಿಕ್ಷಣಕ್ಕಾಗಿ ನೀಟ್ ಅರ್ಹತಾ ಪರೀಕ್ಷೆಯಲ್ಲಿ ಅರ್ಹತೆ ಪಡೆದ ಮಾಜಿ ಸೈನಿಕರು ಮತ್ತು ಮಾಜಿ ಸೈನಿಕರ ಅವಲಂಬಿತರ ಮಕ್ಕಳು ಕೇಂದ್ರೀಯ ಸೈನಿಕ ಮಂಡಳಿ ಮುಖಾಂತರ ವಿತರಿಸಲಾಗುವ ಸೀಟುಗಳನ್ನು ಪಡೆಯ ಲಿಚ್ಚಿಸುವವರು, ನೀಟ್ ಅರ್ಹತಾ ಪರೀಕ್ಷೆಯ ಫಲಿತಾಂಶದ 20 ದಿನಗಳೊಳಗಾಗಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಶಿವಮೊಗ್ಗ ಇವರಿಂದ ಮಾಜಿ ಸೈನಿಕ ಅರ್ಹತಾ ಪ್ರಮಾಣ ಪತ್ರವನ್ನು ಪಡೆದು, ಇಲಾಖೆಯ ನಿರ್ದೇಶನಾಲಯದಿಂದ ಮೇಲು ರುಜು ಪಡೆದ ನಂತರ ಆನ್‌ಲೈನ್ ಮೂಲಕ ಕೆ.ಎಸ್.ಬಿ ಜಾಲತಾಣದಲ್ಲಿ www.ksb.gov.in ನಲ್ಲಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಮಾಹಿತಿಗೆ ಕೆ.ಎಸ್.ಬಿ ಜಾಲತಾಣ www.ksb.gov.in ನಲ್ಲಿ ಮಾಹಿತಿಯನ್ನು ಪಡೆಯಬಹುದಾಗಿದೆ ಎಂದು ಸೈನಿಕ ಕಲ್ಯಾಣ, ಪುನರ್ವಸತಿ ಇಲಾಖೆ ಉಪ ನಿರ್ದೇಶಕರು ತಿಳಿಸಿದ್ದಾರೆ.

## ಭವಿಷ್ಯ ನಿಧಿ ಅದಾಲತ್ ಸಭೆ

ದಾವಣಗೆರೆ, ಸೆ.6- ಭವಿಷ್ಯ ನಿಧಿ ಅದಾಲತ್ ಅನ್ನು ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತರರು ಇದೇ ದಿನಾಂಕ 12 ರಂದು ಭವಿಷ್ಯ ನಿಧಿ ಕಚೇರಿ (ಮಲ್ಲಿಗೇನಹಳ್ಳಿ)ಯಲ್ಲಿ ಇಪಿಎಫ್ ಮತ್ತು ಇಪಿಎಸ್ ಸದಸ್ಯರಿಗಾಗಿ ಅದಾಲತ್ ನಡೆಸಲಿದ್ದಾರೆ. ವಿವರವನ್ನು ಒದಗಿಸಲು ನಾಡಿದ್ದು ದಿನಾಂಕ 8 ರೊಳಗೆ ro.shivamogga@epfindia.gov.in ಗೆ ಕಳುಹಿಸಬಹುದು ಎಂದು ಪ್ರಾದೇಶಿಕ ಭವಿಷ್ಯನಿಧಿ ಆಯುಕ್ತರು ತಿಳಿಸಿದ್ದಾರೆ.

# ಸಮಗ್ರ ಕೃಷಿ, ಉತ್ಪನ್ನಗಳ ಸ್ವ ಸಂಸ್ಕರಣೆಯಿಂದ ಸಮೃದ್ಧಿ

### ನಗರದ ಬೀಜ ನಿಗಮದ ಆವರಣದಲ್ಲಿ ವಿವಿಧ ಕೇಂದ್ರಗಳ ಶಂಕುಸ್ಥಾಪನೆಯಲ್ಲಿ ಕೃಷಿ ಸಚಿವ ಬಿ.ಸಿ. ಪಾಟೀಲ್

ದಾವಣಗೆರೆ, ಸೆ. 5 - ಸಮಗ್ರ ಕೃಷಿ ಹಾಗೂ ಉತ್ಪನ್ನಗಳ ಸ್ವಯಂ ಸಂಸ್ಕರಣೆಯಿಂದ ರೈತರು ಸಮೃದ್ಧರಾಗಲು ಸಾಧ್ಯ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ್ ತಿಳಿಸಿದ್ದಾರೆ.

ನಬಾರ್ಡ್ - ಆರ್‌ಐಡಿಎಫ್ 27 ಯೋಜನೆಯಡಿ ನಗರದ ಬೀಜ ನಿಗಮದ ಆವರಣದಲ್ಲಿ ಸ್ಥಾಪಿಸಲಾಗುತ್ತಿರುವ ಶೀತಲ ಘಟಕ, ಸಮಗ್ರ ಕೃಷಿ ಪದ್ಧತಿ ಶ್ರೇಷ್ಠತಾ ಕೇಂದ್ರ ಹಾಗೂ ಕೃತಕ ಬುದ್ಧಿಮತ್ತೆ ಕೇಂದ್ರಗಳ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

ಕೋಲಾರದಲ್ಲಿ ಅತಿ ಕಡಿಮೆ ಮಳೆ ಬರುತ್ತದೆ. ಆದರೂ, ಅಲ್ಲಿನ ಕೃಷಿಕರು ಕುರಿ ಸಾಕಣೆಯಂತಹ ಉಪ ಕಸುಬು ಹಾಗೂ ಸಮಗ್ರ ಕೃಷಿ ಪದ್ಧತಿಯಿಂದ ಸಮೃದ್ಧರಾಗಿದ್ದಾರೆ. ಈ ಸೂತ್ರಗಳನ್ನು ಅಳವಡಿಸಿಕೊಳ್ಳುವ ಜೊತೆಗೆ, ಕೃಷಿ ಉತ್ಪನ್ನಗಳನ್ನು ತಾವೇ ಸಂಸ್ಕರಣೆ ಮಾಡುವುದರಿಂದ ರೈತರಿಗೆ ಹೆಚ್ಚಿನ ಲಾಭ ಸಿಗುತ್ತದೆ ಎಂದವರು ಹೇಳಿದರು.

ರೈತರು ಹಾಗೂ ಕೃಷಿ ಕಾರ್ಮಿಕರ ಮಕ್ಕಳಿಗೆ ವಿದ್ಯಾನಿಧಿ ನೀಡುವ ಹಾಗೂ ರೈತರ ಟ್ರ್ಯಾಕ್ಟರ್‌ಗಳಿಗೆ ಡೀಸೆಲ್ ಸಬ್ಸಿಡಿ ನೀಡುವ ರೈತ ಶಕ್ತಿ ಯೋಜನೆಗಳನ್ನು ದೇಶದಲ್ಲೇ ಮೊದಲ ಬಾರಿಗೆ ಕರ್ನಾಟಕದಲ್ಲಿ ಜಾರಿಗೆ ತರಲಾಗುತ್ತಿದೆ. ಹದಿನೈದು ದಿನಗಳಲ್ಲಿ ಡೀಸೆಲ್ ಸಬ್ಸಿಡಿ ರೈತರಿಗೆ ಲಭ್ಯವಾಗಲಿದೆ. ಮುಖ್ಯಮಂತ್ರಿಗಳು ನೇರ ಸಬ್ಸಿಡಿ ಮೂಲಕ ರೈತರಿಗೆ ಎಕರೆಗೆ 250 ರೂ.ಗಳ ನೆರವು ಬಿಡುಗಡೆ ಮಾಡಲಿದ್ದಾರೆ ಎಂದವರು ತಿಳಿಸಿದರು.

ರೈತರು ಇಂದು ದೇಶದ 138 ಕೋಟಿ ಜನರಿಗೆ ಆಗುವಷ್ಟು ಆಹಾರ ಉತ್ಪಾದಿಸುತ್ತಿ ದ್ದಾರೆ. ಆದರೂ, ರೈತರಿಗೆ ನಷ್ಟವಾಗುತ್ತಿದೆ. ಇದಕ್ಕೆ ಮಧ್ಯವರ್ತಿಗಳೇ ಕಾರಣ. ರೈತರು ತಾವೇ ಆಹಾರ ಸಂಸ್ಕರಣಾ ಘಟಕ ಸ್ಥಾಪಿಸಿದರೆ ಹೆಚ್ಚು ಲಾಭ ಗಳಿಸಬಹುದು. ಈ ಹಿನ್ನೆಲೆಯಲ್ಲಿ ಸರ್ಕಾರ ಆಹಾರ ಸಂಸ್ಕರಣಾ ಘಟಕಗಳಿಗೆ 10 ಲಕ್ಷ ರೂ.ಗಳವರೆಗೆ ಸಬ್ಸಿಡಿ ನೀಡುತ್ತಿದೆ ಎಂದರು.

ಕೇಂದ್ರ ಸರ್ಕಾರ 1 ಲಕ್ಷ ಕೋಟಿ ರೂ.ಗಳ ಕೃಷಿ ಮೂಲಭೂತ ಸೌಲಭ್ಯ ನಿಧಿ ರೂಪಿಸಿದೆ. ಈ



ಯೋಜನೆಯಡಿ ಶೀತಲ ಘಟಕಗಳಿಗೆ 2 ಕೋಟಿ ರೂ.ಗಳವರೆಗೆ ಸಬ್ಸಿಡಿ ನೀಡಲಾಗುತ್ತಿದೆ. ಆದರೆ, ಕರ್ನಾಟಕ ಈ ನಿಧಿ ಬಳಕೆಯಲ್ಲಿ 6ನೇ ಸ್ಥಾನದಲ್ಲಿದೆ. ರೈತರು ಹೆಚ್ಚಿನ ಪ್ರಮಾಣದಲ್ಲಿ ಈ ನಿಧಿ ಬಳಸಿಕೊಳ್ಳಬೇಕು ಎಂದು ಕರೆ ನೀಡಿದರು.

ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ಶೀತಲ ಘಟಕಗಳಲ್ಲಿ ಕೃಷಿ ಉತ್ಪನ್ನಗಳನ್ನು 2-3 ತಿಂಗಳವರೆಗೆ ಸಂಗ್ರಹಿಸಿಡಬಹುದು. ಈ ಘಟಕಗಳನ್ನು ದಾವಣಗೆರೆ ಹಾಗೂ ಚನ್ನಗಿರಿಯಲ್ಲಿ ಸ್ಥಾಪಿಸುವುದರಿಂದ ರೈತರು ಹೆಚ್ಚಿನ ಲಾಭ ಗಳಿಸಲು ನೆರವಾಗಲಿದೆ ಎಂದರು.

ಕೃಷಿ ಇಲಾಖೆ ಹೆಚ್ಚುವರಿ ನಿರ್ದೇಶಕ ದಿವಾಕರ್ ಮಾತನಾಡಿ, ಕೃಷಿ ಇಲಾಖೆಯ ಹಲವಾರು ಯೋಜನೆಗಳನ್ನು ಜಾರಿಗೆ ತರಲು ಜಮೀನಿನ ಅಗತ್ಯವಿದೆ. ಜಿಲ್ಲೆಯಲ್ಲಿ ಹೆಚ್ಚಿನ ಜಮೀನು ಒದಗಿಸಲು ವ್ಯವಸ್ಥೆ ಮಾಡಿದರೆ, ಕೃಷಿ ಇಲಾಖೆಯ ಯೋಜನೆಗಳನ್ನು ಜಾರಿಗೆ ತರಲು ಹೆಚ್ಚು ಸಹಾಯಕವಾಗುತ್ತದೆ ಎಂದರು.

ಶಾಸಕ ಎಸ್.ಎ. ರವೀಂದ್ರನಾಥ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯ ಮೇಲೆ ಶಾಸಕ ಪ್ರೊ. ಎನ್. ಲಿಂಗಣ್ಣ, ಬಯಲು ಸೀಮೆ ಅಭಿವೃದ್ಧಿ ನಿಗಮದ ಅಧ್ಯಕ್ಷ ಎ. ಜೀವನಮೂರ್ತಿ, ಬೆಂಗಳೂರು ಕೃಷಿ ವಿವಿ ಆಡಳಿತ ಮಂಡಳಿ ಸದಸ್ಯ ಸುರೇಶ್, ಧಾರವಾಡ ಕೃಷಿ ವಿವಿ ಆಡಳಿತ ಮಂಡಳಿ ಸದಸ್ಯ ಅಜಗಣ್ಣ, ಕೃಷಿಕ ಮಂಡಳಿ ಸದಸ್ಯ ಶಾಮನೂರು ಶಿವಣ್ಣ, ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್, ಕೃಷಿ ಇಲಾಖೆ ಉಪ ನಿರ್ದೇಶಕ ಆರ್. ತಿಪ್ಪೇಸ್ವಾಮಿ, ಹರಿಹರ ತಹಶೀಲ್ದಾರ್ ಅಶ್ವತ್ಥ್, ಗೃಹ ಮಂಡಳಿಯ ಸೈಯದ್ ಮೆಹಬೂಬ್, ಸುಧೀರ್, ಆರ್.ಆರ್. ಕನ್‌ಸ್ಟ್ರಕ್ಷನ್‌ನ ಪುರುಷೋತ್ತಮ್, ಬಾಲಾಜಿ ಇನ್‌ಫ್ರಾದ ತ್ಯಾಗರಾಜ್ ಮತ್ತಿತರರು ಉಪಸ್ಥಿತರಿದ್ದರು.

> **ರೈತರ ಟ್ರ್ಯಾಕ್ಟರ್‌ಗಳಿಗೆ ಡೀಸೆಲ್ ಸಬ್ಸಿಡಿ ನೀಡುವ ರೈತ ಶಕ್ತಿ ಯೋಜನೆಯನ್ನು ದೇಶದಲ್ಲೇ ಮೊದಲ ಬಾರಿಗೆ ಕರ್ನಾಟಕದಲ್ಲಿ ಜಾರಿಗೆ ತರಲಾಗುತ್ತಿದೆ. ಹದಿನೈದು ದಿನಗಳಲ್ಲಿ ಡೀಸೆಲ್ ಸಬ್ಸಿಡಿ ರೈತರಿಗೆ ಲಭ್ಯವಾಗಲಿದೆ.**
> **- ಬಿ.ಸಿ. ಪಾಟೀಲ್, ಕೃಷಿ ಸಚಿವ**

### 2,500 ಟನ್‌ಗಳ ಸಾಮರ್ಥ್ಯದ ಘಟಕಗಳು

ದಾವಣಗೆರೆ ಹಾಗೂ ಚನ್ನಗಿರಿಯಲ್ಲಿ 2,500 ಟನ್‌ಗಳ ಸಾಮರ್ಥ್ಯದ ಎರಡು ಶೀತಲೀಕರಣ ಘಟಕಗಳನ್ನು ಮಂಜೂರು ಮಾಡಲಾಗಿದೆ. ತಲಾ 10 ಕೋಟಿ ರೂ. ವೆಚ್ಚದಲ್ಲಿ ಈ ಘಟಕಗಳು ನಿರ್ಮಾಣವಾಗಲಿವೆ.

ರಾಜ್ಯಕ್ಕೆ ಈ ವರ್ಷ 13 ಶೀತಲೀಕರಣ ಘಟಕಗಳನ್ನು ಮಂಜೂರು ಮಾಡಲಾಗಿದೆ. ಈ ಪೈಕಿ ಎರಡು ದಾವಣಗೆರೆ ಹಾಗೂ ಚನ್ನಗಿರಿಯಲ್ಲಿ ನಿರ್ಮಾಣವಾಗುತ್ತಿವೆ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ್ ತಿಳಿಸಿದ್ದಾರೆ. ಮಾನವನ ಮೆದುಳಿನ ರೀತಿ ವರ್ತಿಸುವ ಕೃತಕ ಬುದ್ಧಿಮತ್ತೆ ಕೃಷಿಗೆ ಉಪಯುಕ್ತವಾಗಿದೆ. ಇದರ ಜೊತೆಗೆ ಡ್ರೋನ್ ರೀತಿಯ ಉಪಕರಣಗಳು ರೈತರಿಗೆ ಸಹಕಾರಿ. ಈ ಹಿನ್ನೆಲೆಯಲ್ಲಿ ನಗರದಲ್ಲಿ ಕೃತಕ ಬುದ್ಧಿಮತ್ತೆ ಕಟ್ಟಡ ನಿರ್ಮಿಸಲಾಗುತ್ತಿದೆ ಎಂದು ಪಾಟೀಲ್ ಹೇಳಿದ್ದಾರೆ.

### ಸೆ.12ರ ಒಳಗೆ ರೈತರಿಗೆ ಪರಿಹಾರ

ಮಳೆಯಿಂದಾಗಿ ಜಿಲ್ಲೆಯಲ್ಲಿ 16 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಬೆಳೆ ನಷ್ಟವಾಗಿದೆ. ಸೆ.12ರ ಒಳಗೆ ಎಲ್ಲ ರೈತರಿಗೆ ಪರಿಹಾರ ನೀಡಲಾಗುವುದು ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ್ ತಿಳಿಸಿದ್ದಾರೆ. ಜಿಲ್ಲೆಯಲ್ಲಿ 16 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ನಷ್ಟವಾಗಿದೆ. 8 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಆಗಿರುವ ನಷ್ಟದ ಮಾಹಿತಿಯನ್ನು ಪೋರ್ಟಲ್‌ನಲ್ಲಿ ದಾಖಲಿಸಲಾಗಿದೆ ಎಂದವರು ಹೇಳಿದರು.ಜಂಟಿ ಸಮೀಕ್ಷೆ ಈಗಾಗಲೇ ಪೂರ್ಣಗೊಂಡಿದೆ. ಉಳಿದ ನಷ್ಟದ ಬಗ್ಗೆಯೂ ಪೋರ್ಟಲ್‌ನಲ್ಲಿ ದಾಖಲಿಸಿ, ಸೆ.12ರ ಒಳಗೆ ಪರಿಹಾರ ನೀಡಲಾಗುವುದು ಎಂದವರು ತಿಳಿಸಿದರು.

### ಭೂ ಕಬಳಿಕೆಯಲ್ಲಿ ಎಲ್ಲ ಪಕ್ಷಗಳು ಭಾಗಿ

ದಾವಣಗೆರೆ, ಸೆ. 6 - ಬೆಂಗಳೂರು ಸುತ್ತಮುತ್ತ ಭೂ ಕಬಳಿಕೆ, ಒತ್ತುವರಿ ಯಲ್ಲಿ ಎಲ್ಲಾ ಪಕ್ಷದವರು ಭಾಗಿಯಾಗಿದ್ದಾರೆ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ್ ಹೇಳಿದ್ದಾರೆ.

ಬೆಂಗಳೂರಿನಲ್ಲಿ ಉಂಟಾಗಿರುವ ನೆರೆ ಪರಿಸ್ಥಿತಿ ಕುರಿತು ಪತ್ರಕರ್ತರು ಕೇಳಿದ ಪ್ರಶ್ನೆಗೆ ಉತ್ತರಿಸುತ್ತಿದ್ದ ಅವರು, ಬೆಂಗಳೂರು ಸುತ್ತ ಮುತ್ತಲಿನ ನಾಯಕರೇ ಅಲ್ಲಿ ಒತ್ತುವರಿ ಹಾಗೂ ಕಬಳಿಕೆ ಮಾಡಿಕೊಂಡಿದ್ದಾರೆ. ಹಿಂದಿನ ಸರ್ಕಾರಗಳ ಅವಧಿಯಲ್ಲಿ ಕೆಲವರು ಬೇಕಾ ಬಿಟ್ಟಿಯಾಗಿ ನಗರ ಯೋಜನೆಯನ್ನು ರೂಪಿಸಿದ್ದಾರೆ.

ಇದರಲ್ಲಿ ಎಲ್ಲಾ ಪಕ್ಷದವರೂ ಭಾಗಿಯಾಗಿದ್ದಾರೆ ಎಂದರು. ಸರ್ಕಾರ ಪರಿಸ್ಥಿತಿ ನಿಭಾಯಿಸಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಜಾಗದಲ್ಲಿ ಹಾಗೂ ರಾಜಕಾಲುವೆಗಳಲ್ಲಿ ಆಗಿರುವ ಒತ್ತುವರಿಗಳನ್ನು ತೆರವುಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದವರು ಹೇಳಿದರು.

## ನಗರದಲ್ಲಿ ಇಂದು ಕಾಶಿ ಜಗದ್ಗುರುಗಳ ಬೆಳ್ಳಿ ಅಡ್ಡಪಲ್ಲಕ್ಕಿ ಉತ್ಸವ

### ಭಾವೈಕ್ಯ, ಜನಜಾಗೃತಿ ಧರ್ಮ ಸಮ್ಮೇಳನಕ್ಕೆ ಬಿ.ಎಸ್. ಯಡಿಯೂರಪ್ಪ



ಶ್ರೀಶೈಲ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರು ಹಾಗೂ ಕಾಶಿ ಜಗದ್ಗುರು ಡಾ. ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಭಗವತ್ಪಾದರು ಇವರಿಂದ ಶ್ರೀ ಜಗದ್ಗುರು ಪಂಚಾಚಾರ್ಯ ಮಂದಿರದ ದ್ವಾರ ಬಾಗಿಲು ಉದ್ಘಾಟನೆ ಹಾಗೂ ಶ್ರೀಶೈಲ ಜಗದ್ಗುರುಗಳಾದ ಲಿಂ. ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರು ಹಾಗೂ ಲಿಂ. ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರ ಭಾವಚಿತ್ರ ಹಾಗೂ ರಜತಮೂರ್ತಿಗಳ ಮೆರವಣಿಗೆ ಮತ್ತು ಕಾಶಿ ಜಗದ್ಗುರು ಡಾ. ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಭಗವತ್ಪಾದರ ಪುರಪ್ರವೇಶದೊಂದಿಗೆ ಬೆಳ್ಳಿ ಅಡ್ಡಪಲ್ಲಕ್ಕಿ ಉತ್ಸವ ಜರುಗಲಿದೆ.

ಸಂಜೆ 6 ಗಂಟೆಗೆ ದಾವಣಗೆರೆ-ಹರಿಹರ ಅರ್ಬನ್ ಸಹಕಾರಿ ಸಮುದಾಯ ಭವನದಲ್ಲಿ ಭಾವೈಕ್ಯ, ಜನಜಾಗೃತಿ ಧರ್ಮ ಸಮ್ಮೇಳನ ನಡೆಯಲಿದೆ.

ಉಜ್ಜಯಿನಿ ಜಗದ್ಗುರು ಶ್ರೀ ಸಿದ್ಧಲಿಂಗ ರಾಜದೇಶಿಕೇಂದ್ರ, ಶಿವಾಚಾರ್ಯ ಭಗವತ್ಪಾದರು, ಶ್ರೀಶೈಲ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರು, ಕಾಶಿ ಜಗದ್ಗುರು ಡಾ. ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಭಗವತ್ಪಾದರು ಸಾನ್ನಿಧ್ಯ ವಹಿಸಲಿದ್ದಾರೆ.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ.

ಹಗರಿಬೊಮ್ಮನಹಳ್ಳಿ ಗುರುಪಾದ ದೇವರ ಮಠದ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ, ರಟ್ಟಿಹಳ್ಳಿ ಕಬ್ಬಿಣಕಂತಿ ಮಠದ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ, ಕೊಟ್ಟೂರು ಚಾನುಕೋಟಿ ಮಠದ ಶ್ರೀ ಡಾ. ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ರಾಣೇಬೆನ್ನೂರು-ಮದ್ರಕಿ ಮಠದ ಶ್ರೀ ಶಿವಯೋಗಿ ಶಿವಾಚಾರ್ಯ ಸ್ವಾಮೀಜಿ, ತಾವರಕೆರೆ ಶಿಲಾಮಠದ ಶ್ರೀ ಅಭಿನವ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಹರಪನಹಳ್ಳಿ ತೆಗ್ಗಿನಮಠದ ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ, ನಂದೀಪುರದ ಶ್ರೀ ಮಹೇಶ್ವರ ಸ್ವಾಮೀಜಿ, ಕೂಡಲದ ಶ್ರೀ ಗುರು ನಂಜೇಶ್ವರ ಶಿವಾಚಾರ್ಯ ಸ್ವಾಮೀಜಿ, ಕುರುವತ್ತಿ ಹಿರೇನಂದಿಮಠದ ಶ್ರೀ ಸಿದ್ಧನಂದೀಶ್ವರ ಶಿವಾಚಾರ್ಯ ಸ್ವಾಮೀಜಿ, ನಾಗವಂದ ಹೊರಗಿನ ಮಠದ ಶ್ರೀ ಶಿವಯೋಗಿ ಶಿವಾನಂದ ಶಿವಾಚಾರ್ಯ ಸ್ವಾಮೀಜಿ ಸಮ್ಮುಖ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಜವಳಿ ವರ್ತಕ ಬಿ.ಸಿ. ಉಮಾಪತಿ, ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಭಾಗವಹಿಸಲಿದ್ದಾರೆ. ಪುಣ್ಯಾರಾಧನೆ ಸಮಿತಿ ಕಾರ್ಯಾಧ್ಯಕ್ಷ ಎನ್.ಎ. ಮುರುಗೇಶ್ ಆಶಯ ನುಡಿಗಳನ್ನಾಡುವರು. ಇದೇ ವೇಳೆ ಶಿವಮೊಗ್ಗದ ಬಿ. ಮಹಾರುದ್ರಪ್ಪ, ಮಲೇಬೆನ್ನೂರಿನ ಬಿ. ನಾಗೇಶಪ್ಪ, ಗುಡ್ಡಾಪುರದ ಸಿದ್ಧಯ್ಯಸ್ವಾಮಿ ಹಿರೇಮಠ ಅವರಿಗೆ ಗುರು ರಕ್ಷೆ ನೀಡಲಾಗುವುದು.

## ವಿದ್ಯಾರ್ಥಿ ವೇತನ ಅರ್ಜಿ ಆಹ್ವಾನ

ದಾವಣಗೆರೆ, ಸೆ.6- 2022-23ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಸಿಖ್, ಬೌದ್ಧ, ಪಾರ್ಸಿ ವಿದ್ಯಾರ್ಥಿಗಳಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ/ಮೆರಿಟ್ ಕಂ ಮೀನ್ಸ್ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಯನ್ನು ಇಲಾಖೆ ವೆಬ್ ಸೈಟ್ http://dom.karnataka.gov.in ನಲ್ಲಿ ಪರಿಶೀಲಿಸಬಹುದು. ಅರ್ಜಿ ಸಲ್ಲಿಸಲು ಸೆ.30 ಕೊನೆಯ ದಿನವಾಗಿರುತ್ತದೆ. ಮಾಹಿತಿಗೆ ದೂ.:08192-250066ನ್ನು ಸಂಪರ್ಕಿಸಬಹುದೆಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾಧಿಕಾರಿ ತಿಳಿಸಿದ್ದಾರೆ.

## ನಗರದಲ್ಲಿ ಇಂದು ರಾಷ್ಟ್ರೀಯ ನೇತ್ರದಾನ ಪಾಕ್ಷಿಕ ಆಚರಣೆ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಅಂಧತ್ವ ಹಾಗೂ ದೃಷ್ಟಿದೋಷ ನಿಯಂತ್ರಣ ಕಾರ್ಯಕ್ರಮ ಹಾಗೂ ಸಮಾಜ ಕಾರ್ಯ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಇವರ ಸಂಯುಕ್ತಾಶ್ರಯದಲ್ಲಿ ಇಂದು ಬೆಳಿಗ್ಗೆ 10.30 ಕ್ಕೆ ಎಂ.ಬಿ.ಎ ಸಭಾಂಗಣ ವಿಶ್ವವಿದ್ಯಾನಿಲಯದಲ್ಲಿ 37ನೇ ರಾಷ್ಟ್ರೀಯ ನೇತ್ರದಾನ ಪಾಕ್ಷಿಕ ಆಚರಣೆಯನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವನ್ನು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಎ. ಚನ್ನಪ್ಪ ಉದ್ಘಾಟಿಸುವರು. ವಿಶ್ವವಿದ್ಯಾನಿಲಯದ ಕುಲಪತಿ ಬಿ.ಡಿ ಕುಂಬಾರ ಅಧ್ಯಕ್ಷತೆ ವಹಿಸುವರು ಹಾಗೂ ವಿಶ್ವವಿದ್ಯಾನಿಲಯದ ಕುಲಸಚಿವರಾದ ಸರೋಜ ಬಿ.ಬಿ ಗೌರವ ಉಪಸ್ಥಿತರಿರುವರು.

ಮುಖ್ಯ ಅತಿಥಿಗಳಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ನಾಗರಾಜ, ಚಿಗಟೇರಿ ಜಿಲ್ಲಾ ಆಸ್ಪತ್ರೆ ಅಧೀಕ್ಷಕ ಡಾ. ಷಣ್ಮುಖಪ್ಪ, ಜಿಲ್ಲಾ ಅಂಧತ್ವ ಮತ್ತು ದೃಷ್ಟಿದೋಷ ನಿಯಂತ್ರಣಾಧಿಕಾರಿ ಡಾ. ಪಿ.ಡಿ. ಮುರುಳೀಧರ, ದಾವಣಗೆರೆ ಸಮಾಜ ಕಾರ್ಯ ಅಧ್ಯಯನ ವಿಭಾಗದ

ಡಾ.ಶಿವಲಿಂಗಪ್ಪ, ಸಹ ಪ್ರಧ್ಯಾಪಕ ಡಾ. ಎಂ.ಯು. ಲೋಕೇಶ್ ಪಾಲ್ಗೊಳ್ಳುವರು. ಚಿಗಟೇರಿ ಜಿಲ್ಲಾ ಆಸ್ಪತ್ರೆ ಹಿರಿಯ ನೇತ್ರ ತಜ್ಞರಾದ ಡಾ. ಶ್ರೀಮಂತ ಸಿದ್ದಪ್ಪ ಕೋಳಕೂರ್ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸುವರು.

## ನಗರದಲ್ಲಿ ಇಂದು ವಾರ್ಷಿಕ ಕ್ರೀಡಾಕೂಟ ಸಮಾರೋಪ

ಬಾಪೂಜಿ ಕಾಲೇಜ್ ಆಫ್ ನರ್ಸಿಂಗ್ ಹಾಗೂ ಬಾಪೂಜಿ ಸ್ಕೂಲ್ ಆಫ್ ನರ್ಸಿಂಗ್ ವತಿಯಿಂದ ಹಮ್ಮಿಕೊಂಡಿದ್ದ ವಾರ್ಷಿಕ ಕ್ರೀಡಾಕೂಟದ ಸಮಾರೋಪ ಸಮಾರಂಭ ಇಂದು ಸಂಜೆ 4 ಗಂಟೆಗೆ ಎಸ್‌ಎಸ್‌ಐಎಂಎಸ್ ಅಂಡ್ ಆರ್.ಸಿ. ಕ್ರೀಡಾ ಮೈದಾನದಲ್ಲಿ ನಡೆಯಲಿದೆ.

ಎಸ್‌ಎಸ್‌ಐಎಂಎಸ್ ಅಂಡ್ ಆರ್‌ಸಿ ವೈದ್ಯಕೀಯ ನಿರ್ದೇಶಕ ಡಾ. ಅರುಣಕುಮಾರ್ ಅಜ್ಜಪ್ಪ ಮುಖ್ಯ ಅತಿಥಿಯಾಗಿ ಆಗಮಿಸಲಿದ್ದು, ಬಾಪೂಜಿ ಕಾಲೇಜ್ ಆಫ್ ನರ್ಸಿಂಗ್ ಪ್ರಾಚಾರ್ಯ ಪ್ರೊ.ಎಸ್.ಎಫ್. ಬಿಲ್ಲಳ್ಳಿ, ಬಾಪೂಜಿ ಸ್ಕೂಲ್ ಆಫ್ ನರ್ಸಿಂಗ್ ಪ್ರಾಚಾರ್ಯ ಕೆ.ಎಂ. ಹರ್ಷ ಅಧ್ಯಕ್ಷತೆ ವಹಿಸಲಿದ್ದಾರೆ.

**ಮಲ್ಲಿಕಾರ್ಜುನ ಪ್ಯಾಕೇಜ್ ಟೂರ್ಸ್**
ಬಟವಾಡಿ ವೃತ್ತ, ತುಮಕೂರು
ಫೋ: 84960 44942, 82774 09101
**ಮಧ್ಯಪ್ರದೇಶ, ಗುಜರಾತ್ ರಾಜ್ಯದ ನಾಲ್ಕು ಜ್ಯೋತಿರ್ಲಿಂಗ ವಿಮಾನ ಪ್ರವಾಸ**
**ಹೊರಡುವುದು : 24.11.2022**
**10 ದಿನಗಳು 38,500/-**
ಮಹಾಕಾಳೇಶ್ವರ ಜ್ಯೋತಿರ್ಲಿಂಗ, ಓಂಕಾರೇಶ್ವರ ಜ್ಯೋತಿರ್ಲಿಂಗ, ಸೋಮನಾಥ ಜ್ಯೋತಿರ್ಲಿಂಗ ನಾಗೇಶ್ವರ ಜ್ಯೋತಿರ್ಲಿಂಗ, ಸರ್ದಾರ್ ಪಟೇಲ್ ಪ್ರತಿಮೆ, ನಿಷ್ಕಳಂಕ ಮಹಾದೇವ, ಪೋರ್ ಬಂದರ್, ದ್ವಾರಕ, ಬೇಟ್ ದ್ವಾರಕ, ಗಾಂಧಿನಗರ ಅಕ್ಷರಧಾಮ, ಅಹಮದಾಬಾದ್ ಸಬರಮತಿ ಆಶ್ರಮ, ಇಂದೂರ್, ಡಾಕೂರ್. ಕಾಫಿ, ತಿಂಡಿ, ಊಟ, ಎಸಿ ರೂಂ, ಸ್ಥಳೀಯ ವೆಚ್ಚ ಸೇರಿದೆ
**(ರೈಲು ಪ್ರವಾಸ 14 ದಿನ 24,900/-)**

## ಹಿಂದೂ ಮಹಾಗಣಪತಿ ಕಾರ್ಯಕ್ರಮದಲ್ಲಿ ದೇವರಮನೆ ಶಿವಕುಮಾರ್‌ಗೆ ಶುಭಾಶಯ




ದಾವಣಗೆರೆ ಬಾಲಕರ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿ ಹಿಂದೂ ಮಹಾಗಣಪತಿ ವತಿಯಿಂದ ಶ್ರೀ ವಿನಾಯಕ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದ್ದು, ಪ್ರಯುಕ್ತ ಮಂಗಳವಾರ ಸಂಜೆ ನಡೆದ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ದೂಡಾ ಮಾಜಿ ಅಧ್ಯಕ್ಷ ದೇವರಮನೆ ಶಿವಕುಮಾರ್ ಅವರನ್ನು ಸನ್ಮಾನಿಸುವುದರ ಮೂಲಕ ಅವರ ಹುಟ್ಟುಹಬ್ಬಕ್ಕೆ ಶುಭಾಶಯ ಕೋರಲಾಯಿತು. ಈ ಸಂದರ್ಭದಲ್ಲಿ ಹಿಂದೂ ಮಹಾಗಣಪತಿಯ ಅಧ್ಯಕ್ಷ ಜೊಳ್ಳಿ ಗುರು, ವಿ.ಸಿದ್ದೇಶ್, ಎಂ.ವಿ.ಜಯಪ್ರಕಾಶ್ ಮಾಗಿ, ಜರೀಕಟ್ಟೆ ಚಂದ್ರು, ಶ್ರೀಕಂಠ ಗೌಡ್ರು, ದೇವರ ಮನೆ ಮುರಿಗೇಶ್ ಹಾಗೂ ಟ್ರಸ್ಟಿನ ಸದಸ್ಯರುಗಳು ಹಾಜರಿದ್ದರು.

## ನಗರದಲ್ಲಿ ಇಂದು ಮೇದಾರ ಸಮಾಜದಿಂದ ಗಣೇಶೋತ್ಸವದ ಧಾರ್ಮಿಕ ಸಮಾರಂಭ

ದಾವಣಗೆರೆ, ಸೆ. 6 - ನಗರದ ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನ ಹಾಗೂ ಮೇದಾರ ಗಿರಿಜನ ಅಭ್ಯುದಯ ಸೇವಾ ಸಂಘಗಳ ವತಿಯಿಂದ ನಾಳೆ ದಿನಾಂಕ 7ರ ಬುಧವಾರ ಸಂಜೆ 6 ಗಂಟೆಗೆ ಬಂಬೂ ಬಜಾರ್‌ನಲ್ಲಿರುವ ದೇವಸ್ಥಾನದ ಆವರಣದಲ್ಲಿ ಶ್ರೀ ಗಣೇಶ ಸುವರ್ಣ ಮಹೋತ್ಸವದ ಧಾರ್ಮಿಕ ಸಮಾರಂಭ ನೆರವೇರಲಿದೆ.


ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸೇವಾ ಸಂಘದ ಅಧ್ಯಕ್ಷ ಟಿ. ಬಸವರಾಜ್, ಸಮಾರಂಭದ ಸಾನ್ನಿಧ್ಯವನ್ನು ಚಿತ್ರದುರ್ಗದ ಶ್ರೀ ಕೇತೇಶ್ವರ ಮಠದ ಪೀಠಾಧಿಪತಿ ಶ್ರೀ ಇಮ್ಮಡಿ ಬಸವ ಮೇದಾರ ಕೇತೇಶ್ವರ ಸ್ವಾಮೀಜಿ ವಹಿಸಲಿದ್ದಾರೆ. ಜಗಳೂರಿನ ಕಣ್ವಕುಪ್ಪೆ ಗವಿಮಠದ ಶ್ರೀ ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಉಪದೇಶ ನೀಡಲಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನ ಸೇವಾ ಸಂಘದ ಅಧ್ಯಕ್ಷ ಟಿ. ಬಸವರಾಜ್ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಮನೂರು ಶಿವಶಂಕರಪ್ಪ, ಎಸ್.ಎಸ್. ಮಲ್ಲಿಕಾರ್ಜುನ್, ಶಿವಾನಂದ ಕಾಪಶಿ, ಸಿ.ಬಿ. ರಿಷ್ಯಂತ್, ಸಿ.ಪಿ. ಪಾಟೀಲ್, ಪಿ.ಎಸ್. ಕಾಂತರಾಜ್, ಎಂ.ಹೆಚ್. ಸುರೇಶ ರೆಡ್ಡಿ, ಮಂಜುನಾಥ ನಾಯಕ್, ಶಿವಪ್ರಕಾಶ್ ಭಾಗವಹಿಸಲಿದ್ದಾರೆ.

ನಾಡಿದ್ದು ದಿನಾಂಕ 8ರ ಗುರುವಾರ ಸಂಜೆ 6 ಗಂಟೆಗೆ ಪ್ರತಿಭಾ ಪುರಸ್ಕಾರ ಹಾಗೂ ತವರಿನ ಹೆಣ್ಣು ಮಕ್ಕಳಿಗೆ ಅರಿಶಿಣ ಕುಂಕುಮ ಕಾರ್ಯಕ್ರಮ ನಡೆಯಲಿದೆ. ಸಾನ್ನಿಧ್ಯವನ್ನು ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ವಹಿಲಿದ್ದಾರೆ. ಮೇದಾರ ಸಮಾಜದ ಕಾರ್ಯದರ್ಶಿ ಕೆ. ಹನುಮಂತಪ್ಪ ಹಾಗೂ ಖಜಾಂಚಿ ಯು. ಗಿರೀಶ್ ಉಪಸ್ಥಿತರಿರಲಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದ ಅವರಣದಲ್ಲಿ ನಿರ್ಮಿಸಲಾಗಿರುವ 50 ಅಡಿ ಎತ್ತರದ ಗಣಪತಿ ಪ್ರತಿಷ್ಠಾಪನೆ ದೇವಸ್ಥಾನದ ಮೇದಾರ ಸಮಾಜದ ಕಾಯಕ ಪ್ರಾವಿಣ್ಯತೆ ತೋರಿಸುತ್ತಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಮೇದಾರ ಸಮಾಜದ ಮುಖಂಡರಾದ ಹನುಮಂತಪ್ಪ, ಗಿರೀಶ್, ತಿಮ್ಮಣ್ಣ, ನಾಗರಾಜ್, ಎನ್.ಟಿ. ನಾಗರಾಜ್, ಗಿರೀಶ್ ಮತ್ತಿತರರು ಉಪಸ್ಥಿತರಿದ್ದರು.



॥ ಶ್ರೀ ಜಗದ್ಗುರು ಪಂಚಾಚಾರ್ಯಃ ಪ್ರಸೀದಂತು ॥ ॥ ಶ್ರೀ ಜಗದ್ಗುರು ಪಂಡಿತಾರಾಧ್ಯೋ ವಿಜಯತೇ ॥



ಶ್ರೀಮದ್ ಗಿರಿರಾಜ ಸೂರ್ಯ ಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಶ್ರೀ ಶೈಲ ಜಗದ್ಗುರು

**ಲಿಂ. ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಭಗತ್ಪಾದಂಗಳವರ 36ನೇ ವಾರ್ಷಿಕ ಪುಣ್ಯಾರಾಧನೆ** ಮತ್ತು

ಶ್ರೀಮದ್ ಗಿರಿರಾಜ ಸೂರ್ಯ ಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಶ್ರೀ ಶೈಲ ಜಗದ್ಗುರು

**ಲಿಂ. ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಭಗತ್ಪಾದಂಗಳವರ 11ನೇ ವಾರ್ಷಿಕ ಸ್ಮರಣೋತ್ಸವ** ಹಾಗೂ

ಶ್ರೀಮದ್ ಗಿರಿರಾಜ ಸೂರ್ಯಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಶ್ರೀಶೈಲ ಜಗದ್ಗುರು

**ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರ ದ್ವಾದಶ ಪೀಠಾರೋಹಣ ಮಹೋತ್ಸವ**

ದಿನಾಂಕ 07-09-2022ನೇ ಬುಧವಾರ ಬೆಳಿಗ್ಗೆ

ಉಭಯ ಜಗದ್ಗುರುಗಳವರಿಂದ **ಶ್ರೀ ಜಗದ್ಗುರು ಪಂಚಾಚಾರ್ಯ ಮಂದಿರದ ದ್ವಾರಬಾಗಿಲು ಉದ್ಘಾಟನೆ**

**ಬೆಳ್ಳಿ ಅಡ್ಡಪಲ್ಲಕ್ಕಿ ಮಹೋತ್ಸವ :**

**ಶ್ರೀ ಶ್ರೀ ಶ್ರೀ 1008 ಶ್ರೀಶೈಲ 'ಲಿಂ. ಉಭಯ' ಜಗದ್ಗುರುಗಳವರ ಭಾವಚಿತ್ರ ಹಾಗೂ ರಜತಮೂರ್ತಿಗಳ ಮೆರವಣಿಗೆ** ಮತ್ತು

ಶ್ರೀಮತ್ ಕಾಶಿ ಜ್ಞಾನಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು

**ಡಾ. ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಭಗವತ್ಪಾದರು,** ಕಾಶೀ ಮಹಾಪೀಠ

ಇವರ ಪುರಪ್ರವೇಶದೊಂದಿಗೆ **'ಬೆಳ್ಳಿ ಅಡ್ಡಪಲ್ಲಕ್ಕಿ'** ಉತ್ಸವ ನಗರದ ಪ್ರಮುಖ ರಸ್ತೆಗಳಲ್ಲಿ ಜರುಗುವುದು. (ಶ್ರೀಶೈಲ ಮಠದಿಂದ ಅಡ್ಡಪಲ್ಲಕ್ಕಿ ಉತ್ಸವ ಆರಂಭ)

**ಶ್ರೀ ಶ್ರೀ ಶ್ರೀ 1008 ಕಾಶಿ ಜಗದ್ಗುರುಗಳನ್ನು ದಿನಾಂಕ 07.09.2022ರ ಬುಧವಾರ ಬೆಳಿಗ್ಗೆ 11 ಗಂಟೆಗೆ ಬೈಕ್ ರ್‍ಯಾಲಿ ಮೂಲಕ ಶಾಮನೂರು ಬೈಪಾಸ್‌ನಿಂದ ಶ್ರೀ ಶ್ರೀಶೈಲ ಮಠಕ್ಕೆ ಕರೆತರಲಾಗುವುದು.**

# ಭಾವೈಕ್ಯ, ಜನಜಾಗೃತಿ, ಧರ್ಮ ಸಮಾರಂಭ

ದಿನಾಂಕ 07-09-2022ನೇ ಬುಧವಾರ ಸಂಜೆ 6 ಗಂಟೆಗೆ

ಸ್ಥಳ : ದಾವಣಗೆರೆ-ಹರಿಹರ ಅರ್ಬನ್ ಸಹಕಾರಿ ಸಮುದಾಯ ಭವನ, ಕಲಾ ಪ್ರಕಾಶ ವೃಂದ, ವಿನೋಬ ನಗರ, ದಾವಣಗೆರೆ.

**ದಿವ್ಯಸಾನ್ನಿಧ್ಯ :**

ಶ್ರೀಮದ್ ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ
ಶ್ರೀ ಶ್ರೀ ಶ್ರೀ 1008 ಜಗದ್ಗುರು
**ಶ್ರೀ ಸಿದ್ಧಲಿಂಗ ರಾಜದೇಶೀಕೇಂದ್ರ ಶಿವಾಚಾರ್ಯ ಭಗವತ್ಪಾದರು,** ಉಜ್ಜಯಿನಿ ಮಹಾಪೀಠ.

ಶ್ರೀಮದ್ ಗಿರಿರಾಜ ಸೂರ್ಯ ಸಿಂಹಾಸನಾಧೀಶ್ವರ
ಶ್ರೀ ಶ್ರೀ ಶ್ರೀ 1008 ಜಗದ್ಗುರು
**ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರು,** ಶ್ರೀಶೈಲ ಮಹಾಪೀಠ.

ಶ್ರೀಮದ್ ಕಾಶಿ ಜ್ಞಾನ ಸಿಂಹಾಸನಾಧೀಶ್ವರ
ಶ್ರೀ ಶ್ರೀ ಶ್ರೀ 1008 ಜಗದ್ಗುರು
**ಡಾ. ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಭಗವತ್ಪಾದರು,** ಕಾಶೀ ಮಹಾಪೀಠ.

ಉದ್ಘಾಟನೆ : **ಮಾನ್ಯಶ್ರೀ ಬಿ.ಎಸ್. ಯಡಿಯೂರಪ್ಪನವರು,** ಮಾಜಿ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.
ಅಧ್ಯಕ್ಷತೆ : **ಡಾ. ಶಾಮನೂರು ಶಿವಶಂಕರಪ್ಪನವರು,** ಶಾಸಕರು ಹಾಗೂ ರಾಷ್ಟ್ರಾಧ್ಯಕ್ಷರು, ಅ.ಭಾ.ವೀ. ಮಹಾಸಭಾ (ರಿ.)
ಮುಖ್ಯ ಅತಿಥಿಗಳು : **ಶ್ರೀ ಬಿ.ಸಿ. ಉಮಾಪತಿ,** ಪ್ರಸಿದ್ಧ ಜವಳಿ ವರ್ತಕರು, ದಾವಣಗೆರೆ.
**ಶ್ರೀ ಶಿವಾನಂದ ಕಾಪಸೆ,** ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ದಾವಣಗೆರೆ ಜಿಲ್ಲೆ.
ಆಶಯ ನುಡಿ : **ಶ್ರೀ ಎನ್.ಎ. ಮುರುಗೇಶ್,** ಕಾರ್ಯಾಧ್ಯಕ್ಷರು, ಪುಣ್ಯಾರಾಧನೆ ಸೇವಾ ಸಮಿತಿ.

ದಿನಾಂಕ 08-09-2022ನೇ ಗುರುವಾರ ಬೆಳಿಗ್ಗೆ 8 ಗಂಟೆಗೆ

ಶ್ರೀಮತ್ ಕಾಶಿ ಜ್ಞಾನಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು

**ಡಾ. ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಭಗವತ್ಪಾದರಿಂದ ಸಂಗೀತಯುಕ್ತ ಇಷ್ಟಲಿಂಗ ಮಹಾಪೂಜೆ**

**ಪದಾಧಿಕಾರಿಗಳು ಹಾಗೂ ಸದಸ್ಯರು ಶ್ರೀ ಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರ ಪುಣ್ಯಾರಾಧನೆ ಸೇವಾ ಸಮಿತಿ. ದಾವಣಗೆರೆ.**

ಶ್ರೀಮದ್ ಗಿರಿರಾಜ ಸೂರ್ಯ ಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಶ್ರೀಶೈಲ ಜಗದ್ಗುರು

**ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರಿಗೆ 50ನೇ ಜನ್ಮ ಸುವರ್ಣ ಮಹೋತ್ಸವದ ಭಕ್ತಿಪೂರ್ವಕ ಪ್ರಣಾಮಗಳು.**



# ಸರ್ವರಿಗೂ ಆದರದ ಸುಸ್ವಾಗತ

**ಶ್ರೀ ಎನ್.ಎ. ಮುರುಗೇಶ್**
ಕಾರ್ಯಾಧ್ಯಕ್ಷರು, ಪುಣ್ಯಾರಾಧನೆ ಸೇವಾ ಸಮಿತಿ.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte